CC-O. In Public Domain. Digitized by eGangotri

ಬೆಳೆ ತಂದ ಭಾಗ್ಯ

ಎ. ಎಸ್. ವಿಜಯೇಂದ್ರಮೂರ್ತಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈ ಸೂ ರು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲನೆಯ ಮುದ್ರಣ— ೧೯೬೮
ಎರಡನೆಯ ಮುದ್ರಣ—೫೦೦೦ ಪ್ರತಿಗಳು, ೧೯೭೨
ಮೂರನೆಯ ಮುದ್ರಣ—೬೦೦೦ ಪ್ರತಿಗಳು, ೧೯೮೮

ಬೆಲೆ : ರೂ. ೨-೫೦

ಮುದ್ರಕರು

ಶ್ರೀ ರಾಜೇಂದ್ರ ಪ್ರಿಂಟರ್ಸ್

ಶಿವರಾಂಪೇಟೆ, ಮೈಸೂರು—570 001

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಅನಕ್ಷರಸ್ಥ ವಯಸ್ಕರು ಓದು, ಬರಹ ಕಲಿತ ಪಾತ್ರಕ್ಕೆ ವಯಸ್ಕರ ಶಿಕ್ಷಣದ ಪ್ರಗತಿಯು ಸಾಧಿಸಿತು ಎಂದು ಲೆಕ್ಕಾಚಾರ ಹಾಕುವುದು ಸರಿಯಲ್ಲ. ಕಲಿತ ಓದನ್ನು ಯಾವ ಮಟ್ಟಕ್ಕೆ ಉಳಿಸಿಕೊಂಡಿದ್ದಾರೆ, ಉಳಿಸಿಕೊಳ್ಳಲು ಯಾವ ಬಗೆಯ ಪ್ರಯತ್ನ ಮಾಡುತ್ತಿದ್ದಾರೆ ಇತ್ಯಾದಿಯ ಬಗ್ಗೆ ವಯಸ್ಕರ ಶಿಕ್ಷಣ ರಂಗದ ಬಗ್ಗೆ ಆಸಕ್ತಿ ಇರುವ ಯಾರೇ ಆಗಲಿ ಇಂದು ಪ್ರಾಮಾಣಿಕವಾಗಿ ಚಿಂತಿಸಬೇಕಾದ, ಆ ದಿಕ್ಕಿನಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇಂದು ಇದೆ.

ಈ ಹಿನ್ನೆಲೆಯಲ್ಲಿ ವಯಸ್ಕರು ಕಲಿತ ಓದನ್ನು ಉಳಿಸಿಕೊಳ್ಳಲು ಓದಿನ ಮೂಲಕ ಅರಿವು ಮೂಡಿ ಆತನ ಬದುಕು ಪ್ರಗತಿಯ ಕ್ರಿಯಾಶೀಲತೆಯತ್ತ ನಡೆಯಲು ಸಹಾಯಕವಾಗುವಂತೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಹೊರ ತಂದಿರುವ ವಯಸ್ಕರಿಗೆ ಉಪಯುಕ್ತವಾದ ಅವರ ಆಸಕ್ತಿ ಅಭಿರುಚಿಗೆ ಅನುಗುಣವಾಗಿ, ಓದಲು ಸುಲಭವಾದ ಅನುಭವಿ ಲೇಖಕರು ಬರೆದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಲ್ಲಿ ಈ ಕೃತಿಯೂ ಒಂದು.

ಈಗಾಗಲೇ ಹೊರ ಬಂದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳೆಂದೇ ಜನಪ್ರಿಯವಾಗಿರುವ, ಓದುಗರಿಂದ, ಸಾಹಿತ್ಯಾಸಕ್ತರಿಂದ ಸಾಧಿಸಾಧ್ಯಂತ ಮೆಚ್ಚಿಗೆ ಪಡೆದಿರುವ ಈ ಮಾಲಿಕೆಯ ಪುಸ್ತಕಗಳಲ್ಲಿ ಒಂದನೂರು ಕೃತಿಗಳ ಪುನರ್ ಮುದ್ರಣ ಕೈಗೊಳ್ಳಲಾಗಿದೆ. ಈ ಕೃತಿಗಳು ನಮ್ಮ ಉದ್ದೇಶದ ಈಡೇರಿಕೆಯಲ್ಲಿ ಸಫಲವಾಗಬಲ್ಲದು ಎಂಬ ಆಶಯ ನಮ್ಮದು.

ಪ್ರಕಟಣಾ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ ನನ್ನ ವಂದನೆಗಳು,

ದಿನಾಂಕ : 15-11-1988 **ದೇವನೂರು ಶಿವಮಲ್ಲು**

ಅಧ್ಯಕ್ಷರು

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು

Sri Vidyabharathi Book Centre, Sringeri

ನಮ್ಮ ಪ್ರಕಾಶನ CC-0. In Public Domain. Digitized by eGangotri

ಹೊಸದಾಗಿ ಅಕ್ಷರ ಕಲಿತ ಮತ್ತು ಪ್ರಾಥಮಿಕ ಶಾಲೆಯಲ್ಲಿ ಓದಿ ಮುಂದೆ ಓದಲಾಗದ ವಯಸ್ಕರಿಗೆ ಸರಳವಾದ, ಉಪಯುಕ್ತವಾದ ಸಾಹಿತ್ಯವನ್ನು ಒದಗಿಸುವುದು ವಯಸ್ಕರ ಶಿಕ್ಷಣ ರಂಗದಲ್ಲಿ ಬಹು ಮುಖ್ಯವಾದ ಕೆಲಸ. ಸಾಕ್ಷರತೆ ಚಟ್ಟಿನಾರ್ಜನೆಗೆ ಒಂದು ಸಾಧನವೇ ಹೊರತು ಅದೇ ಗುರಿಯಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದ್ದರಿಂದ ಸಾಕ್ಷರತೆ ಓದುಗನ ನಿತ್ಯ ಜೀವನದ ಕೈದೀವಿಗೆಯಾಗಬೇಕು ಎಂದು ವಿಶ್ವವಿದ್ಯಾಲಯಗಳು ಸೇರಿದಂತೆ ಯುನೆಸ್ಕೊ ಸಂಸ್ಥೆಯವರು ಸಾರಿರುವ ಕ್ರಿಯಾತ್ಮಕ ಸಾಕ್ಷರತಾ (Functional Literacy) ಯೋಜನೆಯಲ್ಲಿ ಭಾರತವೂ ತನ್ನ ಕೈಲಾದ ಸೇವೆಯನ್ನು ಸಲ್ಲಿಸುತ್ತಿದೆ. ಈ ಸಿದ್ಧತೆಯಲ್ಲಿ ಶಾಸ್ತ್ರೀಯವಾಗಿ ರಚಿಸಿದ ಸಾಹಿತ್ಯದ ಪಾತ್ರ ಹಿರಿದು.

ಈ ರೀತಿಯ ಸಾಹಿತ್ಯವನ್ನು ರಚಿಸುವುದು ಅಷ್ಟೇನೂ ಸುಲಭವಲ್ಲ. ಅನುಭವಸ್ಥ ಲೇಖಕರಿಗೂ ಈ ರಂಗದಲ್ಲಿ ಶಿಕ್ಷಣ ಅಗತ್ಯ. ಇದನ್ನು ಗಮನಿಸಿ, ಸರಕಾರಿಗಳು, ವಯಸ್ಕರ ಶಿಕ್ಷಣ ಸಂಸ್ಥೆಗಳು, ಲೇಖಕರಿಗೆ ತರಬೇತು ನೀಡುವ ಸಾಹಿತ್ಯ ರಚನಾಲಯಗಳನ್ನು ಏರ್ಪಡಿಸುತ್ತಿವೆ. ಮೈಸೂರು ರಾಜ್ಯದಲ್ಲಿ ಇದುವರೆಗೆ ಎಂಟು ಸಾಹಿತ್ಯ ರಚನಾಲಯಗಳು ನಡೆದಿವೆ.

ಲಕ್ನೋ ನಗರದಲ್ಲಿರುವ ಸಾಕ್ಷರತಾ ನಿಕೇತನದ ಸಹಾಯದಿಂದ ನಂಜನಗೂಡು ವಿದ್ಯಾಪೀಠದಲ್ಲಿ ತಾ॥ ೧೫-೫-೬೮ ರಿಂದ ೧೪-೮-೬೮ರ ವರೆಗೆ ನಡೆದ ಸಾಹಿತ್ಯ ರಚನಾಲಯದಲ್ಲಿ ೨೧ ಲೇಖಕರು ವಯಸ್ಕರ ಆಸಕ್ತಿ ಅಭಿರುಚಿ ಮತ್ತು ಅಗತ್ಯಗಳು, ಪದಸಂಪತ್ತು, ವಾಚ್ಯಶಕ್ತಿ, ಅವರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗಳಿಗನುಸಾರವಾಗಿ ೨೧ ಪುಸ್ತಕಗಳನ್ನು ರಚಿಸಿದ್ದಾರೆ. ಯಾರಿಗಾಗಿ ರಚಿಸಿದ್ದಾರೋ ಅವರಿಂದ ಓದಿಸಿ ತಪ್ಪು ತಿದ್ದಿ ಒಪ್ಪವಾಗಿಸಿದ್ದಾರೆ. ಓದುಗಾರಿಕೆಯಲ್ಲಿ ಹೆಚ್ಚು ಪಳಗದ ಮತ್ತು ಓದಿನಲ್ಲಿ ಆಸಕ್ತಿ ಇರುವ ಅಕ್ಷರಸ್ಥರಿಗೆ ಉಪಯುಕ್ತವಾದ ಮತ್ತು ಸ್ವಾರಸ್ಯವಾದ ವಿಷಯಗಳ ಮೇಲೆ ಇರುವ ಕಿರು ಹೊತ್ತಗೆಗಳು ಇವು.

ಶಾಸ್ತ್ರೀಯವಾಗಿ ರಚಿತವಾಗಿರುವ ಈ ಪುಸ್ತಕಗಳು ಓದುಗರಿಗೆ ಹೆಚ್ಚು ಉಪಯೋಗವಾಗುವುದೆಂದು ಆಶಿಸುವ.

ಪಿ. ಎನ್. ಜವರಪ್ಪಗೌಡ

ಅಧ್ಯಕ್ಷ

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಗಣ್ಣ ಆನಂದಪುರಕ್ಕೆ ಬಂದ.

ರಾತ್ರಿ ಬಹಳ ಹೊತ್ತಾಗಿತ್ತು. ರಾಮಣ್ಣನಿಗೆ ನಿದ್ದೆ ಹತ್ತಿರಲಿಲ್ಲ. ಹಾಸಿಗೆಯಲ್ಲಿ ಅತ್ತ ಇತ್ತ ಹೊರಳಾಡುತ್ತ ಇದ್ದ.

ರಾಮಣ್ಣ ಆನಂದಪುರದ ರೈತ. ಇವರ ತಂದೆಗೆ ಇವ ಒಬ್ಬನೆ ಮಗ. ಹಣವಂತನೇನೂ ಅಲ್ಲ. ಜೀವನಕ್ಕೆ ತೊಂದರೆ ಇರಲಿಲ್ಲ. ಇವನ ತಂದೆ ಬಹಳ ಪ್ರೀತಿಯಿಂದ ಸಾಕಿದ್ದರು. ಈತನಿಗೆ ಬೇಸಾಯದ ಕೆಲಸ ಹೆಚ್ಚಾಗಿ ತಿಳಿಯದು. ಆಳಿನ ಮೂಲಕ ಬೇಸಾಯ ಮಾಡಿಸುತ್ತ ಇದ್ದ. ಮೊನ್ನೆ ಮೊನ್ನೆ ಆಳು ಹೇಳದೆ ಕೇಳದೆ ಓಡಿ ಹೋಗಿದ್ದ.

ರಾಮಣ್ಣನ ಹೆಂಡತಿ ತಾಯಕ್ಕ. ಗಂಡನಿಗೆ ಸರಿಯಾದ ಜೋಡಿ. ಇವರಿಗೆ ಒಬ್ಬಳೇ ಮಗಳು. ಮಗಳ ಹೆಸರು ಗೌರಿ. ಗೌರಿಗೆ ಈಗ ಹದಿನೈದು ವರುಷ.

ಏಕೆ ಹೀಗೆ ಹಾಸಿಗೆಯಲ್ಲಿ ಹೊರಳಾಡುತ್ತ ಇದ್ದಾರೆ? ಏನಾದರೂ ಆಯಾಸ ಆಗಿರುವುದೆ? ಎಂದು ತಾಯಕ್ಕ ಯೋಚಿಸಿದಳು.

"ಏಕೆ? ನಿದ್ದೆ ಹತ್ತಿರಲಿಲ್ಲವೆ? ಏನು ಯೋಚಿಸುತ್ತ ಇರುವಿರಿ? ಎಂದು ಕೇಳಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಏನಿಲ್ಲ, ಈ ದಿವಸ ಹೊಲದ ಹತ್ತಿರ ಹೋಗಿ ಬಂದೆ. ನಮ್ಮ ಅಕ್ಕ ಪಕ್ಕದವರು ಭೂಮಿಯನ್ನು ಬೇಸಾಯಕ್ಕೆ ಹದ ಮಾಡಿದ್ದಾರೆ. ನಮ್ಮ ಭೂಮಿ ಹಾಳು ಬಿದ್ದಿದೆ. ಎತ್ತು, ಏರುಗಳಿದ್ದರೂ, ಹೀಗಾಯಿತಲ್ಲ? ಎಷ್ಟು ಪ್ರಯತ್ನಿಸಿದರೂ ಒಬ್ಬ ಆಳೂ ಸಿಗುವುದಿಲ್ಲ. ಬೇಸಾಯ ನನ್ನಿಂದ ಸಾಗದು. ಮುಂದೆ ಏನು ಮಾಡುವುದು" ಎಂದ ರಾಮಣ್ಣ ಚಿಂತೆಯಿಂದ.

"ಚಿಂತಿಸಿ ಏನು ಪ್ರಯೋಜನ? ಏನಾದರೂ ಪ್ರಯತ್ನಮಾಡಿ" ತಾಯಕ್ಕ ಹೇಳಿದಳು. "ನೋಡಿ ಮರೆತಿದ್ದೆ. ಶಿವಪುರದಿಂದ ಪಕ್ಕದ ಮನೆಗೆ ನೆಂಟರು ಬಂದಿದ್ದರು. ನಾನು ಅವರ ಮನೆಗೆ ಹೋಗಿದ್ದೆ. ಕೆಂಚಪ್ಪನವರ ಮಗ ರಂಗಣ್ಣ ಜಮೀನು ಭೋಗ್ಯ ಮಾಡಿಬಿಟ್ಟನಂತೆ."

"ಏಕೆ ಜಮೀನು ಭೋಗ್ಯ ಮಾಡಿದನಂತೆ? ಈಗ ಏನು ಮಾಡುತ್ತಾನೆ?"

"ಅದನ್ನು ಹೇಳುತ್ತೇನೆ ಕೇಳಿ. ರಂಗಣ್ಣನ ತಂದೆ ಕಾಯಿಲೆ ಇದ್ದರಲ್ಲ. ಆಗ ಕೈಲಿ ಇದ್ದ ಹಣವೆಲ್ಲ ಔಷಧಕ್ಕಾಗಿ ಖರ್ಚಾಯಿತಂತೆ. ಸಾಲದ್ದಕ್ಕೆ ವಿಪರೀತವಾಗಿ ಸಾಲ ಸಹ ಆಯಿತಂತೆ. ಅವರ ತಿಥಿ ಮಾಡಲು ಯಾರೂ ಸಹಾಯ ಮಾಡಲಿಲ್ಲವಂತೆ. ಜಮೀನು ಭೋಗ್ಯ ಮಾಡಿಬಿಟ್ಟನಂತೆ". ಎಂದಳು ತಾಯಕ್ಕ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಅಯ್ಯೋ ಪಾಪ! ಎಂತಹ ಮನೆ ಹೇಗಾಯ್ತು. ಇದೊಂದೂ ನನಗೆ ತಿಳಿಯಲೇ ಇಲ್ಲವಲ್ಲ. ಅದು ಸರಿ, ಈಗ ಏನು ಮಾಡುತ್ತ ಇರುವನಂತೆ"? ರಾಮಣ್ಣ ಮತ್ತೆ ಕೇಳಿದ.

"ಬೇರೆಯವರ ಜಮೀನು ಪಾಲಿಗೆ ಮಾಡಲು ಪ್ರಯತ್ನಿಸಿದನಂತೆ. ಯಾರ ಜಮೀನು, ಪಾಲಿಗಾಗಲೀ, ಗುತ್ತಿಗೆಗೇ ಆಗಲಿ ಸಿಗಲಿಲ್ಲವಂತೆ. ಸ್ವಲ್ಪ ಓದಿರುವುದರಿಂದ ಕೆಲಸಕ್ಕೆ ಸೇರುವುದು. ಅದಕ್ಕಾಗಿ ನಗರಕ್ಕೆ ಹೋಗುವುದು ಎಂದು ಹೇಳುತ್ತ ಇರುವನಂತೆ" ಎಂದಳು ತಾಯಕ್ಕ.

"ನಿನಗೆಲ್ಲೊ ಹುಚ್ಚು, ಓದಿದವರಿಗೆಲ್ಲಾ ಈಗ ಎಲ್ಲಿ ಕೆಲಸ ಸಿಗುವುದು. ರಂಗಣ್ಣ ಹೈಸ್ಕೂಲು ಓದಿದ್ದರೂ ಬೇಸಾಯ ಚೆನ್ನಾಗಿ ಮಾಡಿಸುತ್ತ ಇದ್ದ. ನಾನು ಶಿವ ಪುರಕ್ಕೆ ಹೋಗಿದ್ದಾಗ ಆತನ ಜಮೀನು ನೋಡಿದ್ದೆ. ಇದೆ ನೋಡು "ಹಲ್ಲಿದ್ದವರಿಗೆ ಕಡಲೆ ಇಲ್ಲ. ಕಡಲೆ ಇದ್ದವರಿಗೆ ಹಲ್ಲಿಲ್ಲ ಎನ್ನುವುದು. ಮೈ ಮುರಿದು ದುಡಿಯುವ ರಂಗಣ್ಣನ ಸ್ಥಿತಿ ಕೇಳಿದರೆ ಸಂಕಟ ಆಗುವುದು" ಎಂದ ರಾಮಣ್ಣ.

"ಅದು ಸರಿ, ಹೇಗೂ ಕೆಂಚಪ್ಪನವರು ನಮ್ಮ ಹತ್ತಿರದ ನೆಂಟರು. ನಿಮ್ಮ ಆಪ್ತರೂ ಆಗಿದ್ದರು. ಒಳ್ಳೆಯ ಮನೆತನಕ್ಕೆ ಸೇರಿದವರು. ಏಕೆ ಅವರ ಮಗ ರಂಗಣ್ಣನನ್ನ ನೀವು ಕರೆತರಬಾರದು?" ತಾಯಕ್ಕ ತನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಚನೆಯನ್ನು ಗಂಡನ ಮುಂದಿಟ್ಟಳು. ರಾಮಣ್ಣನಿಗೂ ಈ ಮಾತು ಸರಿ ಎನಿಸಿತು.

ಸರಿಯಾಗಿ ಹೇಳಿದೆ ಆತನಿಗೂ ಯಾರೂ ಇಲ್ಲ. ಹೇಗೂ ನನ್ನಿಂದ ಬೇಸಾಯ ಕೆಲಸ ಸಾಗುತ್ತಿಲ್ಲ. ನನ್ನ ಆರೋಗ್ಯ ಸುಧಾರಿಸುವಂತೆ ಕಾಣುವುದಿಲ್ಲ. ನೀನು ಹೇಳಿದ ಹಾಗೆ ಮಾಡುತ್ತೇನೆ. ನಾಳೆಯೇ ಶಿವಪುರಕ್ಕೆ ಹೋಗಿ ಬರುತ್ತೇನೆ."

"ನೋಡಿ! ರಂಗಣ್ಣ ಇಲ್ಲಿಗೆ ಬರಲು ಒಪ್ಪದಿರ ಬಹುದು. ತಿಳಿವಳಿಕೆ ಹೇಳಿ. ಆತನ ತಾಯಿ ಆದರೂ ಇದ್ದಿದ್ದರೆ, ನಾನೇ ಹೋಗಿ ಕರೆತರುತ್ತಿದ್ದೆ. ಪಾಪ! ತಂದೆ ತಾಯಿ ಇಲ್ಲದ ತಬ್ಬಲಿ ರಂಗಣ್ಣ. ಊಟ ತಿಂಡಿಗೆ ಏನು ಮಾಡುತ್ತಿರುವನೊ? ದೇವರ ಮೇಲೆ ಭಾರ ಹಾಕಿ ಹೋಗಿ ಬನ್ನಿ,"

"ಪ್ರಯತ್ನ ನಮ್ಮದು. ಫಲ ದೇವರದು" ಎಂದು ಹೇಳಿ ರಾಮಣ್ಣ ಮಲಗಿದ.

ಮಾರನೆ ದಿವಸ ಮುಂಜಾನೆ ರಾಮಣ್ಣ ಶಿವಪುರ ಸೇರಿದ. ರಂಗಣ್ಣನನ್ನು ಕಂಡು ಮಾತನಾಡಿದ. "ಜಮೀ ನನ್ನು ಒಂದೇ ಸಲ ಮಾರಿದ್ದರೆ ಕೈ ತುಂಬಾ ಹಣ ಬರು ತ್ತಿತ್ತು. ಏನಾದರೂ ಪ್ರಯೋಜನವಾಗಿತ್ತಲ್ಲವೆ"

CC-O. In Public Domain. Digitized by eGangotri

CC-0. In Public Domain. Digitized by eGangotri

ಎಂದು ಕೇಳಿದ ರಾಮಣ್ಣ.

"ಹಾಗಲ್ಲ, ಒರಿಯರು ಎಷ್ಟು ಕಷ್ಟಪಟ್ಟು ಭೂಮಿಯನ್ನು ಸಂಪಾದಿಸಿರುವರೊ? ಅದನ್ನು ಕಸಿದು ಬಿಡುವುದೆ? ಇಂದಲ್ಲ ನಾಳೆ ಆದರೂ ದೇವರು ಕಣ್ಣು ಬಿಟ್ಟು ನೋಡುತ್ತಾನೆ. ಆಗ ಜಮೀನು ಬಿಡಿಸಿಕೊಳ್ಳೋಣ ಎಂದು ಭೋಗ್ಯ ಮಾಡಿದೆ" ಎಂದ ರಂಗಣ್ಣ.

"ಹಾಗಿದ್ದ ಮೇಲೆ ನನ್ನ ಸಂಗಡ ನಮ್ಮ ಊರಿಗೆ ಬಾ. ನನ್ನದೇ ಜಮೀನು ಇದೆ. ಬೇಸಾಯಕ್ಕೆ ಬೇಕಾದ ಎತ್ತು ಏರು ಎಲ್ಲಾ ಇದೆ. ನನ್ನಿಂದ ಬೇಸಾಯ ಸಾಗುತ್ತಿಲ್ಲ. ನೀನೆ ನಿಂತು ಬೇಸಾಯ ಮಾಡಿಸು. ಹಣ ಸಂಪಾದಿಸು. ಅದರಿಂದ ನಿನಗೂ ಅನುಕೂಲ, ನನಗೂ ಸಹಾಯ ಮಾಡಿದಂತೆ ಆಗುವುದು" ಎಂದು ರಾಮಣ್ಣ ತಾನು ಬಂದ ಉದ್ದೇಶ ವಿವರಿಸಿದ.

ಸ್ವಲ್ಪ ಹೊತ್ತು ಯೋಚಿಸಿದ ರಂಗಣ್ಣ, ಹೇಗೂ ರಾಮಣ್ಣನವರು ದೂರದವರಲ್ಲ. ಸ್ವಂತ ಊರಿನಲ್ಲಿ ಕೂಲಿ ಮಾಡುವುದು ಸರಿಯಲ್ಲ. ನಗರಕ್ಕೆ ಹೋದ ಮಾತ್ರಕ್ಕೆ ಕೆಲಸ ಸಿಗುವುದು ಕಷ್ಟ. ಇವರು ಹೇಳುವಂತೆ ಕೇಳುವುದೇ ಸರಿಯೆಂದುಕೊಂಡ. ಆಗಲಿ ಎಂದ. ರಾಮಣ್ಣನ ಸಂಗಡ ಆನಂದಪುರಕ್ಕೆ ಬಂದ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಗಣ್ಣ ಬೇಸಾಯ ಮಾಡಿಸಿದ

ಮೂರು ನಾಲ್ಕು ದಿವಸ ಆಯಿತು. ರಂಗಣ್ಣ ಮತ್ತು ರಾಮಣ್ಣ ಹೊಲ ನೋಡಿ ಬರಲು ಹೊರಟಿರು. ಊರ ಮುಂದೆ "ಹೊಲ ತೋರಿಸಿ" ಇದು ಎರಡು ಎಕರೆ ಇದೆ. ಕಳೆದ ಸಾರಿ ರಾಗಿ ಹಾಕಿಸಿದ್ದೆ, ಸರಿಯಾಗಿ ಬೆಳೆ ಆಗಲಿಲ್ಲ" ಎಂದ ರಾಮಣ್ಣ.

ಊರ ಮುಂದಲ ಹೊಲ, ಎಷ್ಟು ಫಲವತ್ತಾಗಿರ ಬೇಕು? ಸರಿಯಾಗಿ ಬೆಳೆ ಆಗಲಿಲ್ಲ ಎಂದರೆ ಏನು? ಏನೋ ಕಾರಣ ಇರಬಹುದು ಎಂದುಕೊಂಡ ರಂಗಣ್ಣ. "ಏಕೆ, ಉಳುಮೆ ಮಾಡಿಸಿಲ್ಲ?" ಎಂದು ರಾಮಣ್ಣನನ್ನು ಕೇಳಿದ.

"ನಾನು ಮೊದಲೇ ಹೇಳಿಲ್ಲವೆ? ನಾನು ಒಬ್ಬಂಟಿಗ, ಆಳು ಬೇಸಾಯ ಮಾಡಿಸುತ್ತ ಇದ್ದ. ನಾನು ಯಾವಾಗಲಾದರೂ ಒಂದೊಂದು ಸಲ ಬರುತ್ತಿದ್ದೆ. ಆಳು ಬಿಟ್ಟ ಮೇಲೆ ಬೇರೆ ಆಳು ಸಿಗಲಿಲ್ಲ. ಒಂದೇ ಸಾರಿ ಉಳುಮೆ ಮಾಡಿಸಿ ಬಿತ್ತನೆ ಮಾಡಬೇಕೆಂದಿದ್ದೆ."

"ಹಾಗಲ್ಲ, ಬೆಳೆ ಕಟಾವು ಮಾಡಿದ ಕೂಡಲೆ ಸುಧಾರಿಸಿದ ನೇಗಿಲಿನಿಂದ ಉಳುಮೆ ಮಾಡಿಸಬೇಕು. ಉದ್ದವಾಗಿ, ಅಡ್ಡವಾಗಿ ಉಳುಮೆ ಮಾಡಿಸುವುದು ಒಳ್ಳೆಯದು. ಇದರಿಂದ ಮಣ್ಣು ಬಿಸಿಲಿಗೂ, ಗಾಳಿಗೂ ಸಿಕ್ಕಿ ಒಣಗು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದು. ಕಳೆ ಕಡ್ಡಿ ಒಂದು ಕಡೆ ಸೇರುವುದು. ದಪ್ಪ ದಪ್ಪ ಹೆಂಟೆಗಳು ಹುಡಿ ಆಗುವುದು. ಇದರಿಂದ ಮುಂದಿನ



ಒಂದೇ ಹೊಲದಲ್ಲಿ ಬೇರೆ ಬೇರೆ ಬೆಳೆಗಳನ್ನು ತೆಗೆದಿರುವ ಚಿತ್ರ

ಬೆಳೆಗೆ ಅನುಕೂಲ ಆಗುವುದು. ರಂಗಣ್ಣ ವಿವರಿಸಿದ. ''ಈ ಸಾರಿ ಏನು ಬೆಳೆ ಹಾಕಿಸೋಣ ? ಪ್ರಶ್ನಿಸಿದ.

"ಇದ್ದೆ ಇದೆಯಲ್ಲ ಜೀವನಕ್ಕೆ ಬೇಕಾದ ರಾಗಿ."

"ರಾಗಿ ಹಾಕಿದ ಹೊಲಕ್ಕೆ ಮತ್ತೆ ರಾಗಿ ಹಾಕ ಬಾರದು. ಅದರಿಂದ ಹೆಚ್ಚು ಬೆಳೆ ಸಿಗುವುದಿಲ್ಲ. ನಾನು ನಿಮ್ಮ ಹಾಗೆ ಬೆಳೆ ಇಡುತ್ತಿದ್ದೆ. ವ್ಯವಸಾಯದ ಅಧಿಕಾರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು ತಿಳಿವಳಿಕೆ ಕೊಟ್ಟಮೇಲೆ ಒಳ್ಳೆಯ ಬೆಳೆ ಪಡೆಯುತ್ತಿದ್ದೆ" ಎಂದ ರಂಗಣ್ಣ.

ಅಂದರೆ ಒಂದೆ ತರಹದ ಬೆಳೆ ಇರುತ್ತಿದ್ದರೆ ಉತ್ತಮ ಬೆಳೆ ಸಿಗುವುದಿಲ್ಲವೆ?"

"ಉತ್ತಮ ಬೆಳೆ ಸಿಗುವುದು, ಆದರೆ ಬಹಳ ಶ್ರಮ ಪಡಬೇಕು. ಹಣ ಖರ್ಚಾಗುವುದು. ಬೇಸಾಯಗಾರರು ಬೇರೆ ಬೇರೆ ರೀತಿ ಬೆಳೆಗಳನ್ನಿಡುತ್ತಾರೆ. ಕೆಲವರು ಒಂದೇ ಬೆಳೆಯನ್ನು ಇಡುತ್ತಾರೆ. ಕೆಲವರು ವಿವಿಧ ಬೆಳೆಗಳನ್ನು ಗೊತ್ತಾದ ಕ್ರಮದಲ್ಲಿ ಇಡುತ್ತಾರೆ."

"ಯಾರು ಯಾವುದೇ ಕ್ರಮ ಅನುಸರಿಸಿದರೂ, ಹೆಚ್ಚು ಬೆಳೆ ಬೆಳೆಯಬಹುದು. ಭೂಮಿಯನ್ನು ಫಲವತ್ತಾಗಿ ಇಡಬೇಕೆಂಬುದೇ ಆಗಿರುತ್ತದೆ."

"ಸಾಮಾನ್ಯವಾಗಿ ಒಂದೇ ತರಹದ ಬೆಳೆ ಇಡುತ್ತಿದ್ದರೆ ಭೂಮಿಯ ಸಾರವು ಕಡಿಮೆ ಆಗುವುದು. ಭೂಮಿಯಲ್ಲಿ ಸಾರವು ಇಲ್ಲದೆ ತಾನಾಗಿಯೇ ಬೆಳೆ ಕಡಿಮೆ ಆಗುವುದು. ಭೂಮಿಯೂ ಬಂಜರು ಬೀಳುವುದು."

"ಒಂದೇ ತರಹದ ಬೆಳೆ ಬೆಳೆಯುತ್ತಿದ್ದರೆ ಆಹಾರ ತಯಾರಿಸುವ ಜೀವಾಣುಗಳು ಕಡಿಮೆ ಆಗುತ್ತ ಹೋಗುತ್ತವೆ. ಇದರಿಂದ ಕೆಲವು ವೇಳೆ ಬೆಳೆಗೆ ರೋಗ ತರುವ ಕ್ರಿಮಿಕೀಟಗಳು ಹೆಚ್ಚುತ್ತವೆ. ಹೊಸ ರೀತಿಯ ಗೊಬ್ಬರ

Sri Vidyabharathi Book Centre, Sringeri

 CC-0. In Public Domain. Digitized by eGangotri

ಇದೆ. ಕ್ರಿಮಿನಾಶಕ ಮದ್ದುಗಳಿವೆ. ಇವನ್ನು ಉಪಯೋಗಿಸಿದರೆ ಉತ್ತಮ ಬೆಳೆ ಪಡೆಯಬಹುದು. ಇದು ಎಲ್ಲರಿಗೂ ಸಾಧ್ಯವಿಲ್ಲ." ರಂಗಣ್ಣ ಬೆಳೆಗಳ ವಿಚಾರ ವಿವರಿಸಿದ.

"ಹಾಗಾದರೆ ವಿಧವಿಧವಾದ ಬೆಳೆ ಇಟ್ಟರೆ ಉತ್ತಮ ಫಸಲು ಸಿಗುವುದೆ ?"

"ಬೆಳೆ ಬದಲಾಯಿಸುತ್ತ ಇದ್ದರೆ ತುಂಬಾ ಲಾಭಕರ. ಒಂದೇ ಭೂಮಿಯಲ್ಲಿ ಒಂದಾದ ಅನಂತರ ಒಂದು ಬೆಳೆ ಇಡುವುದು ಒಳ್ಳೆಯದು. ಭೂಮಿ ಯಾವಾಗಲೂ ಫಲವತ್ತಾಗಿರುತ್ತದೆ. ಬೆಳೆಗೆ ಅಗತ್ಯವಾಗಿ ಬೇಕಾಗಿರುವ ಸಾರಜನಕ ಸಿಗುವುದು. ಹೆಚ್ಚು ಬೆಳೆ ಬೆಳೆಯಲು ಅನುಕೂಲ ಆಗುವುದು. ಭೂಮಿಯಲ್ಲಿ ಬೆಳೆಗೆ ರೋಗ ತರುವ ಕ್ರಿಮಿ ಕೀಟಗಳು ನಾಶ ಆಗುವುವು. ಮಣ್ಣು ಕೊಚ್ಚಿ ಹೋಗದಂತೆ ಆಗುವುದು. ದುಡಿಮೆಗೆ ತಕ್ಕ ಫಲ ಸಿಗುವುದು."

"ಹಾಗಾದರೆ ಯಾವ ರೀತಿ ಬೆಳೆ ತೆಗೆಯಬೇಕು ?"

"ನಮ್ಮ ಭೂಮಿಯನ್ನು ಸಾವಿರಾರು ವರುಷಗಳಿಂದ ಸಾಗುವಳಿ ಮಾಡುತ್ತ ಇದ್ದೇವೆ. ಇದರಿಂದ ಮಣ್ಣಿನ ಸಾರ ಕಡಿಮೆ ಆಗುತ್ತಿದೆ. ಇದಕ್ಕೆ ಮತ್ತೆ ಜೀವ ತುಂಬಬೇಕು. ಅಂದರೆ ಸಾರಜನಕ, ಗಂಧಕ, ರಂಜಕ ಮುಂತಾದ

Sri Vidyabharathi Book Centre, Sringeri

CC-O. In Public Domain. Digitized by eGangotri
ಸಾರವುಳ್ಳ ಗೊಬ್ಬರ ಹಾಕಬೇಕು." ರಂಗಣ್ಣ ವಿವರಿಸತೊಡ ಗಿದ.

"ನೆಲಗಡಲೆ, ಉದ್ದು, ಹೆಸರು, ತೊಗರಿ ಮುಂತಾದ ಬೆಳೆಗೆ ಸಾರಜನಕ ಬೇಡ. ಗ್ರಂಥಿಗಳ ಬ್ಯಾಕ್ಟೀರಿಯಾ ಎಂದರೆ ಗಿಡದ ಬೇರಿನ ಗಂಟುಗಳಲ್ಲಿರುವ ಜೀವಾಣು. ಸಸಿಗಳು ತಮಗೆ ಬೇಕಾದ ಸಾರಜನಕವನ್ನು ಗ್ರಂಥಿಗಳ ಬ್ಯಾಕ್ಟೀರಿಯಾ ಮೂಲಕ ಹೀರಿಕೊಳ್ಳುವುವು. ಇದನ್ನು ಈ ಜೀವಾಣುಗಳು ಗಾಳಿಯ ಮುಖಾಂತರ ಹೀರಿ ಕೊಳ್ಳುವುವು.

"ಹಾಗೆಂದರೆ ಏಕದಳ ಬೆಳೆ ಬೆಳೆಯಬೇಕು. ಅನಂತರ ದ್ವಿದಳ ಧಾನ್ಯದ ಬೆಳೆ ಬೆಳೆಯಬೇಕು ಅಲ್ಲವೆ?" ರಾಮಣ್ಣ ಮಧ್ಯೆ ಮಾತು ಎತ್ತಿದ.

"ಹೌದು. ದ್ವಿದಳ ಧಾನ್ಯಗಳ ಬೇರು ಭೂಮಿ ಯಲ್ಲಿ ಆಳವಾಗಿ ಹೋಗುವುದು. ಭೂಮಿಯ ಕೆಳಭಾಗದ ಆಹಾರವನ್ನು (ಸಾರ) ಉಪಯೋಗಿಸಿಕೊಳ್ಳುವುದು.

"ಏಕದಳ ಧಾನ್ಯಗಳ ಬೇರುಗಳು ಭೂಮಿಯ ಮೇಲು ಭಾಗದಲ್ಲಿ ಇರುವುವು. ಇವು ಮೇಲು ಭಾಗದ ಆಹಾರವನ್ನು ಮಾತ್ರ ಉಪಯೋಗಿಸಿಕೊಳ್ಳುವುದು. ಆದ್ದರಿಂದ ಏಕದಳ ಬೆಳೆಯ ಅನಂತರ ದ್ವಿದಳ ಧಾನ್ಯದ ಬೆಳೆ ಇಡುವುದು ಒಳ್ಳೆಯದು. ಇದರಿಂದ ಭೂಮಿಯ ಸಾರ ಯಾವಾಗಲೂ ಒಂದೇ ಸಮನೆ ಇರುವುದು."
Sri Vidyabharathi Book Centre, Sringeri

CC-O. In Public Domain. Digitized by eGangotri

"ಅಲ್ಲದೆ ಪ್ರತಿ ವರುಷ ಸಾಲು ಜೋಳವನ್ನೆ ಹಾಕ ಬಾರದು. ಇದರಿಂದ ಮಣ್ಣು ಕಡಿಮೆ ಆಗುವುದು. ಒಂದು ಎಕರೆಗೆ ಇಪ್ಪತ್ತನಾಲ್ಕರಿಂದ ಮೂವತ್ತೇಳು ಟನ್ ಮಣ್ಣು ಪ್ರತಿ ವರುಷ ಕಡಿಮೆ ಆಗುವುದು. ಇದನ್ನು ತಡೆಯುವುದು ಅಗತ್ಯ. ಅದಕ್ಕೆ ಜೋಳ ಬೆಳೆದ ನಂತರ ನೆಲಗಡಲೆ ಹಾಕುವುದು ಒಳ್ಳೆಯದು. ಅಲ್ಲದೆ ಮಣ್ಣನ್ನು ಪರೀಕ್ಷೆ ಮಾಡಿಸುವುದು ಒಳ್ಳೆಯದು."

ಪರೀಕ್ಷೆ ಎಂದಾಗ ರಾಮಣ್ಣನಿಗೆ ಅಚ್ಚರಿ ಆಯಿತು. "ಮಣ್ಣಿಗೂ ಪರೀಕ್ಷೆ ಇದೆಯೆ? ಏನು ಜನರನ್ನೂ ದನ ಗಳನ್ನೂ ಪರೀಕ್ಷೆ ಮಾಡಿದಂತೆ ಮಣ್ಣನ್ನೂ ಪರೀಕ್ಷೆ ಮಾಡುವರೆ"?

"ಹೌದು. ಮಣ್ಣನ್ನು ಪರೀಕ್ಷೆ ಮಾಡುವರು. ಇದಕ್ಕಾಗಿ ಸರಕಾರದವರು ಹೆಬ್ಬಾಳದಲ್ಲಿ ಮುಖ್ಯ ಪರೀಕ್ಷಾ ಕೇಂದ್ರ ತೆರೆದಿದ್ದಾರೆ."

"ಇದರಿಂದ ಆಗುವ ಪ್ರಯೋಜನ ಏನು?" ಸಂಶಯಪಟ್ಟ ರಾಮಣ್ಣ ಕೇಳಿದ.

"ಇದೇನು ಹೀಗೆ ಕೇಳುವಿರಿ? ಮನುಷ್ಯನಿಗೆ ರೋಗ ಬಂದರೆ ಪರೀಕ್ಷೆ ಮಾಡಿ ಔಷಧ ಕೊಡುವುದಿಲ್ಲವೆ? ಹಾಗೆಯೇ ಮಣ್ಣು ಪರೀಕ್ಷಿಸುವರು. ಭೂಮಿಯಲ್ಲಿ ಸಾರ ಎಷ್ಟಿದೆ ಎಂದು ನೋಡುವರು. ಯಾವ ಯಾವ ತರಹದ

CC-O. Vidyabharathi Book Centre, Sirsi

CC-O. In Public Domain. Digitized by eGangotri

ಗೊಬ್ಬರದ ಅವಶ್ಯಕತೆ ಇದೆ ಎಂದು ಯೋಚಿಸುತ್ತಾರೆ. ಯಾವ ಯಾವ ತರಹದ ಬೆಳೆ ಬೆಳೆಯಬಹುದು ಎಂದು ತಿಳಿಯುವರು. ಭೂಮಿಯಲ್ಲಿರುವ ಚೌಳು, ಕಾರ, ಹುಳಿ ಕಂಡು ಹಿಡಿಯುವರು. ಅದನ್ನು ಹೋಗಲಾಡಿಸಲು ಮಾಡ ಬೇಕಾದ ಕೆಲಸ ತಿಳಿಸುವರು. ಅಷ್ಟೆ ಅಲ್ಲ, ಮೂರು ನಾಲ್ಕು ವರುಷಗಳಿಗೊಮ್ಮೆ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಇದರಿಂದ ನಮ್ಮ ಭೂಮಿ ಫಲವತ್ತಾಗಿರುವುದೇ ಇಲ್ಲವೆ ಎಂದು ತಿಳಿಯವುದು.

"ಯಾವ ಬೆಳೆಯಾದ ಮೇಲೆ ಯಾವ ಬೆಳೆ ಇಡ ಬೇಕು?" ರಾಮಣ್ಣ ಪ್ರಶ್ನಿಸಿದ. ರಂಗಣ್ಣನ ತಿಳಿವಳಿಕೆ ಬಗ್ಗೆ ತುಂಬಾ ಸಂತೋಷ ಆಯಿತು ಅವನಿಗೆ.

"ಕಳೆದ ಸಾರಿ ರಾಗಿ ಹಾಕಿಸಿರುವಿರಿ. ಈ ಸಾರಿ ಜೋಳ ಹಾಕಿಸಿ. ಜೋಳದ ನಂತರ ಹುರುಳಿ ಹಾಕಿಸಿ. ಅದರ ಮುಂದಿನ ವರುಷ ಮತ್ತೆ ರಾಗಿ ಹಾಕಿಸಬಹುದು. ನೆಲಗಡಲೆ ಬೇಕಾದರೂ ಹಾಕಿಸಬಹುದು. ಅನಂತರ ಜೋಳ ಅಥವಾ ಹತ್ತಿ ಹಾಕಿಸಬಹುದು. ನೀರಿನ ಅನುಕೂಲ, ಹವಾಗುಣ ನೋಡಿಕೊಂಡು ಬೆಳೆ ಇಡುವುದು ಒಳ್ಳೆಯದು" ಎಂದ ರಂಗಣ್ಣ.

"ಇದೆಲ್ಲ ಯಾರಿಗೆ ಗೊತ್ತಪ್ಪ. ನನಗೊಂದು ತಿಳಿಯುವುದಿಲ್ಲ. ಏನು ಮಾಡಿಸುತ್ತೀಯೊ ಮಾಡಿಸು. ಬಿಸಿಲು ಏರುತ್ತಿದೆ. ಹಳ್ಳದ ಜಮೀನನ್ನು ಇನ್ನೊಂದು ದಿವಸ ತೋರಿಸುತ್ತೇನೆ ಎಂದು ಹೇಳಿದ ರಾಮಣ್ಣ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಬ್ಬರೂ ಮನೆ ಸೇರಿದರು. ಗೌರಿ ಎತ್ತುಗಳಿಗೆ ಹುರುಳಿ ತಿನ್ನಿಸಲು ಹೋದಳು. ರಂಗಣ್ಣನು ತಾನೇ ಆ ಕೆಲಸ ಮಾಡಿರುವುದಾಗಿ ಹೇಳಿದ. ಅಂದಿನಿಂದ ರಂಗಣ್ಣನು ರಾಮಣ್ಣನ ಮನೆಯ ಕೆಲಸದಲ್ಲಿ ಭಾಗಿಯಾದನು.

ರಂಗಣ್ಣನು ಮನೆಯವನಂತೆ ಆದ. ಎಲ್ಲರೂ ಅವ ನನ್ನು ಪ್ರೀತಿಯಿಂದ ಕಾಣತೊಡಗಿದರು. ತಾಯಕ್ಕನಿಗೆ ರಂಗಣ್ಣನ ಮೇಲೆ ಮಗನಂತೆ ಪ್ರೀತಿ. ಗೌರಿಯು "ಮಾವ, ಮಾವ" ಎನ್ನುತ್ತ ರಂಗಣ್ಣನಲ್ಲಿ ಸಲಿಗೆ ಬೆಳೆಸಿದಳು. ಗೌರಿಗೆ ರಂಗಣ್ಣನು ಬರಬರುತ್ತ ಪ್ರೀತಿಯ ಮಾವನಾದ ಮತ್ತು ಗೆಳೆಯನಾದ.

ರಂಗಣ್ಣನಿಗೆ ಇವರು ಬೇರೆ ಎಂಬ ಭಾವನೆ ಬರ ಲಿಲ್ಲ. ರಾಮಣ್ಣನವರ ಮನೆಯ ಪ್ರತಿಯೊಂದು ಕೆಲಸ ವನ್ನು ಮಾಡತೊಡಗಿದ.

ಎತ್ತುಗಳು ಸಹ ಬಹು ಬೇಗ ರಂಗಣ್ಣನಿಗೆ ಪಳಗಿ ದುವು. ಹೊಟ್ಟೆಗೆ ಏನಾದರೂ ತಿಂದು ಎತ್ತುಗಳನ್ನು ಮೇಯಿಸಲು ಹೋಗಿ ಬರುತ್ತಿದ್ದ. ಎದ್ದಕೂಡಲೆ ಕೊಟ್ಟಿಗೆ ಗುಡಿಸುವುದು ಗೌರಿಯ ಕೆಲಸ. ಎತ್ತುಗಳಿಗೆ ಹುಲ್ಲು ಹಾಕು ವುದು ಅವಳ ಕೆಲಸ ಆಗಿತ್ತು. ಆ ಕೆಲಸ ಈಗ ರಂಗಣ್ಣ ಮಾಡುತ್ತಿದ್ದ. ಇದರಿಂದ ಗೌರಿಗೆ ಸ್ವಲ್ಪ ಕೆಲಸ ಹಗುರ ಆಯಿತು. ರಂಗಣ್ಣನ ಮೇಲೆ ಪ್ರೀತಿಯೂ ಬೆಳೆಯಿತು.

CC-O. Jayachamarajendra Art Gallery Collection. Digitized by eGangotri

CC-O. In Public Domain. Digitized by eGangotri

ಎತ್ತುಗಳಿಗೆ ಹುರುಳಿ ತಿನ್ನಿಸದೆ ರಂಗಣ್ಣ ಊಟ ಮಾಡುತ್ತ ಇರಲಿಲ್ಲ. ರಂಗಣ್ಣ ಊಟ ಮಾಡುವ ತನಕ ಗೌರಿಯೂ ಊಟ ಮಾಡುತ್ತ ಇರಲಿಲ್ಲ.

x x x x

ಒಂದು ದಿನ ಬೆಳಗಿನ ತಿಂಡಿ ತುಂಬ ಆಗಿತ್ತು. ರಂಗಣ್ಣನಿಗೆ ಹಳ್ಳದ ಪಕ್ಕದ ಜಮೀನು ನೋಡಬೇಕೆಂಬ ಆಸೆ. ರಾಮಣ್ಣನ ಸಂಗಡ ನೋಡಿ ಬರಲು ಹೊರಟ. ಜಮೀನನ್ನು ತೋರಿಸುತ್ತ "ಇದು ಮೂರು ಎಕರೆ ಇದೆ" ಎಂದ ರಾಮಣ್ಣ. ಅದೂ ಉಳುಮೆ ಆಗಿರಲಿಲ್ಲ, ಅದಕ್ಕೂ ಕಳೆದ ಸಾರಿ ರಾಗಿ ಹಾಕಿದ್ದು ಕಂಡುಬಂದಿತು. ಆಹಾ! ಎಂತಹ ಒಳ್ಳೆಯ ಭೂಮಿ, ಎಂದುಕೊಂಡ ರಂಗಣ್ಣ.

ಏನೊಂದೂ ಮಾತನಾಡದೆ ಭೂಮಿಯನ್ನೆ ನೋಡುತ್ತಿದ್ದ ರಂಗಣ್ಣನನ್ನು ಕೇಳಿದ ರಾಮಣ್ಣ. ಏನು ರಂಗಣ್ಣ, ಏನೋ ಯೋಚನೆ ಮಾಡುತ್ತಿರುವೆ ?"

"ಏನಿಲ್ಲ ಎಂತಹ ಅಚ್ಚುಕಟ್ಟಾದ ಭೂಮಿ. ಇಂತಹ ಭೂಮಿ ಇದ್ದರೆ ಚಿನ್ನ ಬೆಳೆಯಬಹುದು" ಎಂದ ರಂಗಣ್ಣ.

"ಅಂದರೆ ಜಮೀನು ಆಬಾದು ಮಾಡಿಲ್ಲ ಎಂದೆ?"

"ಹಾಗೇನಿಲ್ಲ. ಹಳ್ಳದ ಪಕ್ಕದಲ್ಲಿದೆ. ಒಂದು ಬಾವಿ ತೆಗೆಸಿಬಿಟ್ಟಿದ್ದರೆ?" ಎಂದ ರಂಗಣ್ಣ.

CC-O. In Public Domain. Digitized by eGangotri Vidyabharathi Book Centre, Sringeri

CC-O. In Public Domain. Digitized by eGangotri

"ಬಾವಿ ತೆಗೆಸಿದ್ದರೆ ಅಂದರೆ ಏನಪ್ಪ?" ಎಂದು ಕೇಳಿದ ರಾಮಣ್ಣ.

"ಇಡೀ ವರುಷ ಪೂರ್ತಿ ಬೆಳೆ ಬೆಳೆಯಲು ಅನುಕೂಲ ಆಗುತ್ತಿತ್ತು. ಗದ್ದೆಯ ಬೆಳೆಗಳಾದ ಬತ್ತ, ಕಬ್ಬು, ಹೈಬ್ರಿಡ್ ಜೋಳಗಳಿವೆ. ಇವನ್ನು ಬೆಳೆಯಬಹುದಾಗಿತ್ತು. ಇವು ಹೆಚ್ಚು ಇಳುವರಿ ಕೊಡುವ ಬೆಳೆಗಳು." ಹೀಗೆ ಮಾತನಾಡುತ್ತ ಮನೆ ಸೇರಿದರು.

ರಾಮಣ್ಣನವರು ನಗರಕ್ಕೆ ಹೊರಟಿದ್ದರು. ರಂಗಣ್ಣ ನನ್ನು ಬಿತ್ತನೆ ಕಾಳು ತರೋಣ ಬಾ ಎಂದು ಸಂಗಡ ಕರೆದು ಕೊಂಡರು. ಇಬ್ಬರೂ ನಗರ ಸೇರಿದರು. ಅಂಗಡಿ ಹತ್ತಿರ ಹೋದರು, "ಬಿತ್ತನೆಗಾಗಿ ಏನು ಕಾಳು ಕೊಳ್ಳೋಣ" ಎಂದು ಕೇಳಿದರು ರಾಮಣ್ಣ.

"ಏನು ಬಿತ್ತನೆ ಕಾಳನ್ನು ಅಂಗಡಿಯಲ್ಲಿ ಕೊಳ್ಳುವುದೆ ? ಇಲ್ಲಿ ವ್ಯವಸಾಯದ ಇಲಾಖೆ ಇದೆಯಲ್ಲವೆ?" ಎಂದ ರಂಗಣ್ಣ.

"ಅದೆಲ್ಲ ನನಗೇನಪ್ಪ ಗೊತ್ತು. ನಾನು ಒಂದೂ ಕಾಣೆ. ನಾನು ಅಂಗಡಿಯಲ್ಲಿಯೇ ಕಾಳು ಕೊಂಡು ಕೊಳ್ಳುತ್ತಿದ್ದೆ. ನೀನು ತಿಳಿದು ವಿಚಾರಿಸು. ನಿನಗೆ ಎಲ್ಲಿ ಬೇಕೋ ಅಲ್ಲಿ ಕೊಂಡುಕೋ ಎಂದ ರಾಮಣ್ಣ.

Sri Vidyabharathi Book Centre, Sringeri

ಇಬ್ಬರೂ ವ್ಯವಸಾಯದ ಕಛೇರಿ ಹುಡುಕಿಕೊಂಡು

CC-O. In Public Domain. Digitized by eGangotri

ಹೊರಟರು. ವ್ಯವಸಾಯದ ಅಧಿಕಾರಿಗಳನ್ನು ಕಂಡು ಮಾತನಾಡಿದ ರಂಗಣ್ಣ. ತನಗೆ ಬೇಕಾದ ನೆಲಗಡಲೆ, ಜೋಳದ ಬಿತ್ತನೆ ಕಾಳುಗಳನ್ನು ತೆಗೆದುಕೊಂಡ.

"ಇನ್ನು ಸ್ವಲ್ಪ ಹಣ ಉಳಿದಿದೆ. ಮತ್ತೆ ಏನಾದರೂ ಬೇಕಾದರೆ ತೆಗೆದುಕೋ ರಂಗಣ್ಣ" ಎಂದ ರಾಮಣ್ಣ.

"ನಾನು ಅದನ್ನೆ ಯೋಚಿಸುತ್ತಿದ್ದೆ. ಸ್ವಲ್ಪ ಗೊಬ್ಬರ ಸಹ ತೆಗೆದುಕೊಳ್ಳಬೇಕಾಗಿದೆ" ಎಂದ ರಂಗಣ್ಣ.

"ಏನು ಇವರು ಗೊಬ್ಬರ ಸಹ ಕೊಡಿಸುವರೆ? ಇದೊಂದು ನನಗೆ ಗೊತ್ತೇ ಇಲ್ಲವಲ್ಲ. ನಾನು ಹುಟ್ಟಿದ್ದು ದಂಡ. ಇದಕ್ಕೇ ತಿಳಿದವರು ಇರಬೇಕು ಎನ್ನುವುದು"

ತನಗೆ ಬೇಕಾದ ಸೀಮೆಗೊಬ್ಬರ ತೆಗೆದುಕೊಂಡನು ರಂಗಣ್ಣ, ಮನೆಗೆ ಬೇಕಾದ ಸಾಮಾನು ಕೊಂಡನು ರಾಮಣ್ಣ. ಗೌರಿಗೆ ಹೂವು ಕೊಳ್ಳಲು ಮರೆಯಲಿಲ್ಲ ರಂಗಣ್ಣ. ಇಬ್ಬರೂ ಊರು ಸೇರಿದರು.

ಬಿತ್ತನೆ ಕಾಳು ಮತ್ತು ಸೀಮೆ ಗೊಬ್ಬರ ಸಿಕ್ಕಿದ್ದಕ್ಕೆ ರಂಗಣ್ಣನಿಗೆ ಸಂತೋಷ. ನಗರದಿಂದ ತಂದ ಹೂವನ್ನು ಕಂಡ ಗೌರಿಯ ಆನಂದಕ್ಕೆ ಪಾರವೇ ಇಲ್ಲ.

ರಂಗಣ್ಣ ಸುಮ್ಮನೆ ಕೂರುವನೆ? ಒತ್ತಲಿನಲ್ಲಿದ್ದ ಕೊಟ್ಟಿಗೆ ಗೊಬ್ಬರವನ್ನು ಲಾರಿಲೆಟ್ ಟಿಳಿ ಸಾಗಿಸಿದ. ಮಳೆ

Sri Vidyabharathi Book Centre, Srimangala

CC-O. In Public Domain. Digitized by eGangotri

ಗಾಗಿ ಕಾದು ಕುಳಿತ. ರಂಗಣ್ಣನ ಆಸೆ ನಿರಾಸೆ ಆಗಲಿಲ್ಲ. ಸಕಾಲದಲ್ಲಿ ಮಳೆ ಆಯಿತು, ಭೂಮಿ ಉಳಲು ಹದ ಆಗಿತ್ತು. ಸುಧಾರಿಸಿದ ನೇಗಿಲಿನಿಂದ ಆಳವಾಗಿ ಉಳುಮೆ ಮಾಡಿದ.

ಅಡ್ಡವಾಗಿ ಹಲುಬೆ ಹೊಡೆದು ಭೂಮಿಯನ್ನು ಮಟ್ಟಮಾಡಿದ. ಇದರಿಂದ ಮಣ್ಣು ಹುಡಿ ಹುಡಿ ಆಯಿತು. ಹದ ಅರಿತು ನೆಲಗಡಲೆಬೀಜವನ್ನು ಸಾಲು ಬಿತ್ತನೆ ಮಾಡಿದ ಹಟ್ಟಿ ಗೊಬ್ಬರ ಮತ್ತು ಸೀಮೆ ಗೊಬ್ಬರ ಹಾಕುವುದನ್ನು ಮರೆಯಲಿಲ್ಲ ರಂಗಣ್ಣ.

ವ್ಯವಸಾಯದ ಅಧಿಕಾರಿಗಳು ಹೇಳಿದ್ದರು. ಅದರಂತೆ ಹನ್ನೆರಡು ಕೆ. ಜಿ. ಬಿತ್ತನೆ ಬೀಜಕ್ಕೆ ಒಂದು ಔನ್ಸ್ ಸಿರೆಸನ್ (ಡ್ರೈ) ಪುಡಿಯನ್ನು ಬೆರೆಸಿದ್ದ.

ಬಿತ್ತನೆ ಮಾಡಿದ ೬–೭ ದಿವಸಗಳಲ್ಲಿ ಸೊಗಸಾದ ಮೊಳಕೆ ಬಂದಿತು. ಬೀಜದಿಂದ ಬೀಜಕ್ಕೆ ಆರು ಅಂಗುಲ ದೂರ. ಸಾಲಿನಿಂದ ಸಾಲಿಗೆ ಒಂಭತ್ತು ಅಂಗುಲ ದೂರ. ಹೀಗೆ ಇದ್ದುದರಿಂದ ಮೊಳಕೆ ಚೆನ್ನಾಗಿ ಬಂದಿತು.

ಶ್ರಮ ಆದರೂ ರಂಗಣ್ಣ ಸುಮ್ಮನೆ ಕೂರುವನೆ? ಹಳ್ಳದ ಜಮೀನನ್ನು ಪಾಳು ಬಿಡುವನೆ? ಅದನ್ನು ಸಹ ಉಳುಮೆ ಮಾಡಿಸಿದ್ದ. ಎಕರೆ ಒಂದಕ್ಕೆ ಐದು ಆರು ಗಾಡಿಯಂತೆ ಪುಡಿಯಾದ ಹಟ್ಟಿ ಗೊಬ್ಬರ ಹಾಕಿದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭರಣಿ ಮಳೆಯಲ್ಲಿ ಜೋಳವನ್ನು ಬಿತ್ತನೆ ಮಾಡಿದ. ಎಕರೆ ಒಂದಕ್ಕೆ ಎಂಟು, ಹತ್ತು ಕೆ. ಜಿ. ಅಂತೆ ಕಾಳನ್ನು ಸಾಲಾಗಿ ಬಿತ್ತಿದ್ದನು. ಬಿತ್ತಿದ ಐದು ಆರು ದಿನಗಳಲ್ಲಿ ಮೊಳಕೆ ಚೆನ್ನಾಗಿ ಬಂದಿತು. ಪೈರು ಐದು ಆರು ಅಂಗುಲ ಬೆಳೆಯಿತು. ಆಗ ಸಾಲುಗಳ ಮಧ್ಯೆ ಉಳುಮೆ ಮಾಡಿಸಿದ. ಇದರಿಂದ ಬುಡ ಭದ್ರವಾಗಲು ಅನುಕೂಲ ಆಯಿತು. ಮಣ್ಣು ಕೊಚ್ಚಿ ಹೋಗಲು ತಡೆ ಆಯಿತು.

ಇತ್ತ ನೆಲಗಡಲೆ ಬಿತ್ತಿದ. ಇಪ್ಪತ್ತೈದು ದಿವಸಗಳು ಆದುವು. ಆಗ ಮುಳ್ಳು ಹಲುಬೆ ಹೊಡೆಯಲು ಮರೆಯಲಿಲ್ಲ. ಬಿತ್ತಿದ ಒಂದು ತಿಂಗಳಲ್ಲಿ ಶೇಕಡ ೧೦ ಬಿ. ಹೆಚ್. ಸಿ. ಪುಡಿಯನ್ನು ಎಕರೆ ಒಂದಕ್ಕೆ ಹತ್ತು ಕೆ. ಜಿ. ಯಂತೆ ಎರಚಿದ.

ಹೊಲದ ಬಳಿಯೇ ಕಾವಲು ಇರುತ್ತಿದ್ದ ರಂಗಣ್ಣ, ಇದರಿಂದ ಬೆಳೆಗೆ ಪ್ರಾಣಿಗಳ ಹಾವಳಿ ತಪ್ಪಿತು. ಕಾಗೆ, ಕಾಡು ಹಂದಿ, ನರಿ ಬರಲು ಆಗಲಿಲ್ಲ.

ಜೋಳ ಬಿತ್ತಿದ ಒಂದೂವರೆ ತಿಂಗಳ ಅನಂತರ ಕಳೆ ಸಹ ಕೀಳಿಸಿದ, ಜೋಳದ ಪೈರು ಒತ್ತಾಗಿತ್ತು. ಬೆದೆ ಕೀಳಿಸಿದ, ಬ್ಲೈಟಾಕ್ಸ್ ಮಿಶ್ರಣ ನೀರಿನಲ್ಲಿ ಬೀಜವನ್ನು ಬಿತ್ತುವ ಮುನ್ನ ಅದ್ದಿದ್ದ ರಂಗಣ್ಣ. ಇದರಿಂದ ಜೋಳಕ್ಕೆ "ಕಾಡಿಗೆ ರೋಗ" ಬರಲಿಲ್ಲ.

Sri Vidyabharathi Book Centre, Sringeri

ನೆಲಗಡಲೆ ಬಿತ್ತಿ ಎರಡು ತಿಂಗಳಾಗಿತ್ತು. ಮತ್ತೆ

CC-O. In Public Domain. Digitized by eGangotri

ಶೇಕಡ ೧೦ ಬಿ. ಹೆಚ್. ಸಿ. ಪುಡಿಯನ್ನು ಎಕರೆ ಒಂದಕ್ಕೆ ಹತ್ತು ಕೆ. ಜಿ. ಯಂತೆ ಎರಚಿದ. ಅದಕ್ಕೆ ಮೂರು ಕೆ. ಜಿ. ಗಂಧಕದ ಪುಡಿ ಬೆರೆಸಿದ್ದ.

ರಂಗಣ್ಣನ ಶ್ರಮ ವ್ಯರ್ಥ ಆಗಲಿಲ್ಲ. ಕ್ರಮ ಅರಿತು ಬೇಸಾಯ ಮಾಡಿದ್ದರಿಂದ ಹೆಚ್ಚು ಬೆಳೆ ಕೈ ಸೇರಿತು. ಮನೆಯ ತುಂಬಾ ಕಾಳು ತುಂಬಿತ್ತು, ರಾಮಣ್ಣನವರು ಇಷ್ಟು ಕಾಳು ಎಂದೂ ನೋಡಿರಲಿಲ್ಲ. ಅವರ ಸಂತೋಷಕ್ಕೆ ಪಾರವೇ ಇಲ್ಲ.

ತಾಯಕ್ಕನವರಿಗಂತು ಹಿಡಿಸಲಾರದಷ್ಟು ಸಂತೋಷ. ಯಾರು ಮನೆಗೆ ಬಂದರೂ ರಂಗಣ್ಣನನ್ನು ಹೊಗಳುವುದೇ ಆಗಿತ್ತು. ಶ್ರಮಕ್ಕೆ ತಕ್ಕ ಬೆಳೆ ಬಂದಿತ್ತು. ರಂಗಣ್ಣನಿಗೂ ಸಂತೋಷ ಆಯಿತು.

ರಂಗಣ್ಣ ಸುಮ್ಮನೆ ಇರುವನೆ? ನೆಲಗಡಲೆ ಮತ್ತು ಜೋಳ ಬೆಳೆದ ಜಮೀನನ್ನು ಉಳುಮೆ ಮಾಡಿಸಿದ. ಹುರುಳಿ ಹಾಕಿಸಿದ್ದ, ಇದರಿಂದಲೂ ಸಹ ಇಮ್ಮಡಿ ಆಗಿ ಬೆಳೆ ಕೈಗೆ ಸಿಕ್ಕಿತು.

ರಂಗಣ್ಣ ಊಟ ಮಾಡಿ ಕೈ ತೊಳೆದು ಬಂದ. ರಾಮಣ್ಣ ಎಲೆ ಅಡಿಕೆ ಹಾಕುತ್ತ ಕುಳಿತಿದ್ದ. ರಂಗಣ್ಣನನ್ನು ಕಂಡು ಹೇಳಿದ.

"ರಂಗಣ್ಣ, ನಿನ್ನ ಶ್ರಮದಿಂದ ಉತ್ತಮ ಬೆಳೆ

Sri Vidyabharathi Book Centre, Shingeri

CC-O. In Public Domain. Digitized by eGangotri

ಆಯಿತು. ಮನೆಗೆ ಬೇಕಾಗುವಷ್ಟು ಇಟ್ಟು ಉಳಿದ ಕಾಳನ್ನು ಮಾರಿ ಬಿಡೋಣವೆ ?

"ಆ ವಿಚಾರ ತಮಗೆ ಸೇರಿದ್ದು. ಇದರಲ್ಲಿ ನನ್ನ ದೇನೂ ಇರುವುದಿಲ್ಲ." ಎಂದ ರಂಗಣ್ಣ.



ರಂಗಣ್ಣನ ಶ್ರಮದಿಂದ ಉತ್ಪನ್ನವಾದ ಜೋಳದ ಬೆಳೆ ಆಯಿತು.

Sri Vidyabharathi Book Centre, Sirsi

CC-0. In Public Domain. Digitized by eGangotri

ಹಾಗಲ್ಲ ರಂಗಣ್ಣ, ನೀನು ಬೇರೆಯವನೆಂದು ನಾನು ತಿಳಿದಿಲ್ಲ. ಇನ್ನು ಮುಂದೆ ನಿನ್ನನ್ನು ಕೇಳದೆ ನಾನು ಏನೂ ಕೆಲಸ ಮಾಡುವುದಿಲ್ಲ. ನನಗೆ ತಾನೆ ಯಾರು ಇರುವರು. ನನ್ನ ಮುಪ್ಪಿನ ಕಾಲದಲ್ಲಿ ದೇವರು ಬಂದ ಹಾಗೆ ನೀನು ಬಂದಿರುವೆ. ನಿನ್ನ ಶ್ರಮದಿಂದ ನಾವು ಸುಖವಾಗಿ ಇದ್ದೇವೆ.

ರಾಮಣ್ಣನ ಮಾತು ರಂಗಣ್ಣನಿಗೆ ನಾಟಿತು. ಅವನ ಕೊರಳು ಬಿಗಿದು ಬಂತು, ಅವನು ಹೇಳಿದ–"ನೋಡಿ ನೀವು, ತಾಯಕ್ಕನವರು ನನ್ನಲ್ಲಿ ತೋರಿಸಿದ ಪ್ರೀತಿ ಬಹಳ ದೊಡ್ಡದು. ಇದರಿಂದ ನಾನು ಒಂದು ಕಡೆ ನೆಲೆಯಾಗಿ ನಿಂತೆ. ನಿಮ್ಮ ಮನಸ್ಸು ಬಹಳ ದೊಡ್ಡದು. ತಾವು ಎಷ್ಟೇ ಆದರೂ ಹಿರಿಯರು. ವ್ಯವಹಾರವನ್ನು ತಮ್ಮ ಕೈಲಿ ಇಟ್ಟುಕೊಳ್ಳಿ. ತಾವು ಏನು ಹೇಳಿದರೂ ಅದನ್ನು ಮಾಡಲು ಸಿದ್ಧನಿರುತ್ತೇನೆ."

ಮಾರನೆಯ ದಿವಸ ಇಬ್ಬರೂ ನಗರಕ್ಕೆ ಹೋದರು. ಕಾಳು ಮಾರಿದರು. ಕೈತುಂಬಾ ಹಣ ಬಂದಿತು. ಮನೆಗೆ ಬೇಕಾದ ಸಾಮಾನು ಕೊಂಡರು. ರಾಮಣ್ಣನವರ ಆನಂದವೇ ಆನಂದ. ರಂಗಣ್ಣನಿಗೂ, ಗೌರಿಗೂ, ಹೊಸ ಬಟ್ಟೆ ಕೊಳ್ಳಲು ರಾಮಣ್ಣ ಮರೆಯಲಿಲ್ಲ.

ಹೊಸ ಸೀರೆ ಉಟ್ಟ ಗೌರಿಯನ್ನು ನೋಡಬೇಕೆಂಬ ಆಸೆ ರಂಗಣ್ಣನಿಗೆ. ಹೊಸ ಬಟ್ಟೆ ತೊಟ್ಟ ರಂಗಣ್ಣನನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಬೇಕೆಂಬ ಇಷ್ಟ ಗೌರಿಗೆ. ಆದರೆ ಹೇಗೆ ? ಇಬ್ಬರೂ ನಾಚಿದರು.

ಮಗಳ ಮದುವೆ

ಅಂದು ರಾತ್ರಿ ರಾಮಣ್ಣನವರು ಹಣ ಎಣಿಸಿ ಪೆಟ್ಟಿಗೆಯಲ್ಲಿ ಇಟ್ಟರು. ಬಹಳ ಹೊತ್ತಾಗಿತ್ತು. ನಿದ್ರೆ ಬರಲಿಲ್ಲ. ಇದನ್ನು ಗಮನಿಸಿದ ತಾಯಕ್ಕ ಕೇಳಿದಳು. "ಏಕೆ ನಿದ್ರೆ ಬರಲಿಲ್ಲವೆ ? ಏನು ಯೋಚಿಸುತ್ತ ಇರುವಿರಿ?"

"ಏನಿಲ್ಲ. ಕೈತುಂಬ ಹಣ ಬಂದಿದೆ. ಇದನ್ನು ಏನು ಮಾಡುವುದು ? ಏತಕ್ಕೆ ಉಪಯೋಗಿಸುವುದು? ಎಂದು ಯೋಚಿಸುತ್ತ ಇದ್ದೆ" ಎಂದ ರಾಮಣ್ಣ.

"ನೋಡಿ ಗೌರಿಗೆ ಹದಿನೈದು ವರುಷ ತುಂಬಿರುತ್ತೆ. ಸರಿಯಾದ ಕಡೆ ವರ ನೋಡಿ ಮದುವೆ ಮಾಡಿ ಬಿಡಿ. ಅದು ಒಂದು ಭಾರ ಕಳೆದರೆ ಮನಸ್ಸಿಗೆ ಎಷ್ಟೋ ನೆಮ್ಮದಿ ಸಿಗುವುದು." ತಾಯಕ್ಕ ತನ್ನ ಮನಸ್ಸಿನಲ್ಲಿದ್ದದ್ದನ್ನು ಹೇಳಿದಳು.

"ಅದನ್ನೇ ಯೋಚಿಸುತ್ತಿದ್ದೆ. ಅಷ್ಟರಲ್ಲಿ ನೀನೇ ಈ ಪ್ರಶ್ನೆ ಕೇಳಿದ್ದು ಸರಿ ಹೋಯ್ತು."

"ಅಂದರೆ ಈಗಾಗಲೆ ಎಲ್ಲಿ ಆದರೂ ವರ ನೋಡಿದ್ದೀರ."

Sri Vidyabharathi Book Centre, Sringeri

CC-0. In Public Domain. Digitized by eGangotri

ಛೇ, ನಿನ್ನನ್ನು ಕೇಳದೆ ನಾನು ಅಂತಹ ಕೆಲಸ ಮಾಡುವೆನೆ? ನಿನ್ನ ತವರಿನ ಕಡೆ ಯಾರಾದರೂ ಇರುವರೆ? ಇದ್ದರೆ ಒಳ್ಳೆಯದಲ್ಲವೆ?"

ಗೌರಿ ರಂಗಣ್ಣನಿಗೆ ಬುತ್ತಿ ತೆಗೆದುಕೊಂಡು ಹೋಗಿರುವುದು.

ತವರು ಎಂದ ಕೂಡಲೆ ತಾಯಕ್ಕನ ಕಣ್ಣಲ್ಲಿ ನೀರು ಬಂದಿತು. "ಆ ಭಾಗ್ಯ ನನಗೆಲ್ಲಿಂದ ಬರಬೇಕು. ನಾನು ಹಿಂದಿನ ಜನ್ಮದಲ್ಲಿ ಏನು ಮಾಡಿದ್ದೆನೋ? ಇದ್ದ ಒಬ್ಬ ತಮ್ಮನನ್ನೂ ಕಳೆದ ಕೊಂಡೆ. ನನ್ನ ಆಪ್ತರು ಅಂತ

Sri Vidyabharathi Book Centre, Sringeri

CC-O. In Public Domain. Digitized by eGangotri

ನೀವಲ್ಲದೆ ಬೇರೆ ಯಾರು ಇರುವರು'' ಎಂದಳು ತಾಯಕ್ಕ ಮುಖದಿಂದ.

"ಅದು ಸರಿ ಈಗ ಏನು ಮಾಡು ಅಂತೀಯೆ?''

''ನೋಡಿ ರಂಗಣ್ಣನು ದೂರದವನಲ್ಲ. ಲಕ್ಷಣವಾಗಿ ಇದ್ದಾನೆ. ಒಳ್ಳೆಯ ಬೇಸಾಯಗಾರ ಹಾಗೂ ಓದಿರುವನು. ಅಲ್ಲದೆ ನಮ್ಮ ವ್ಯವಹಾರವನ್ನು ಚೆನ್ನಾಗಿ ತಿಳಿದಿದ್ದಾನೆ. ನಮ್ಮ ಕಷ್ಟ ಸುಖಗಳಲ್ಲಿ ಭಾಗಿಯೂ ಆಗಿದ್ದಾನೆ. ಇವನಿಗೆ ನಮ್ಮ ಗೌರಿಯನ್ನು ಕೊಟ್ಟು ಮದುವೆ ಮಾಡಿದರೆ ಒಳ್ಳೆಯದು. ಮುಂದೆ ಗೌರಿಯೂ ಸುಖವಾಗಿ ಇರಬಹುದು.'' ರಾಮಣ್ಣನ ಯೋಚನೆಯೂ ಅದೇ. ತಾಯಕ್ಕನ ಬಾಯಿಯಿಂದಲೂ ಆ ಮಾತು ಕೇಳಿ ಸಂತೋಷ ಆಯಿತು.

''ನಾನು ಅದನ್ನೇ ಯೋಚಿಸುತ್ತಿದ್ದೆ. ನಿನ್ನ ಬಾಯಿಯಿಂದ ಬರಲಿ ಎಂದು ಸುಮ್ಮನಿದ್ದೆ ? ಎಂದ ರಾಮಣ್ಣ.

"ನೀವು ಬಲು ಘಾಟಿ ಇದ್ದೀರಿ. ಮೊದಲೆ ಏಕೆ ಹೇಳಬಾರದಾಗಿತ್ತು'' ಸಿಡುಕಿನಿಂದ ಹೇಳಿದಳು ತಾಯಕ್ಕ. ಆದರೂ ಅವಳ ಮನಸ್ಸಿಗೆ ನೆಮ್ಮದಿ ಆಗಿತ್ತು.

ರಂಗಣ್ಣ ಬಾವಿ ತೋಡಿಸಿದ

ಎಲ್ಲರೂ ಊಟಮಾಡಿ ಆಗಿತ್ತು. ರಾಮಣ್ಣ ಮತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಯಕ್ಕ ಮಾತನಾಡುತ್ತ ಕುಳಿತಿದ್ದರು. ರಂಗಣ್ಣ ಸಹ ಬಂದು ಕುಳಿತ.

"ಊರ ಮುಂದಣ ಹೊಲವನ್ನೇನೋ ಹದ ಮಾಡಿದ್ದಾಯ್ತು. ಹಳ್ಳದ ಜಮೀನನ್ನು ಏನು ಮಾಡುವುದು?" ಮಾತಿಗೆ ಪ್ರಾರಂಭಿಸಿದ ರಂಗಣ್ಣ.

''ನೋಡು ರಂಗಣ್ಣ, ಬೇಸಾಯದ ಕೆಲಸ ನಾನು ಎಂದೋ ಮರೆತು ಬಿಟ್ಟಿದ್ದೇನೆ. ಅದು ನಿನಗೆ ಸೇರಿದ್ದು. ನಿನಗೆ ಹೇಗೆ ಬೇಕೋ ಆ ರೀತಿ ಮಾಡು'' ಎಂದ ರಾಮಣ್ಣ.

''ಮೊನ್ನೆ ನಗರಕ್ಕೆ ಹೋಗಿದ್ದಾಗ ವ್ಯವಸಾಯದ ಅಧಿಕಾರಿಗಳನ್ನು ನೋಡಿದ್ದೆ. ಬಾವಿಯ ಮಾತು ಸಹ ಮಾತನಾಡಿ ಬಂದಿದ್ದೇನೆ. ನೀವು ಒಪ್ಪಿದರೆ ಮುಂದಿನ ಕೆಲಸ ಮಾಡಬಹುದು. ಈ ವರುಷ ಸ್ವಲ್ಪ ಶ್ರಮ ಆಗಬಹುದು. ಹೇಗೂ ಮೂರು ಎಕರೆ ಇರುತ್ತೆ. ಅದರಲ್ಲಿ ಎರಡು ಎಕರೆಯನ್ನು ಗದ್ದೆ ಮಾಡುವುದು. ಉಳಿದ ಒಂದು ಎಕರೆಯನ್ನು ತೋಟವನ್ನಾಗಿ ಮಾಡುವುದು. ಇದರಿಂದ ತುಂಬಾ ಅನುಕೂಲ ಆಗುವುದು.'' ಎಂದ ರಂಗಣ್ಣ.

"ಏನೂಂದ್ರೆ. ನಿಮ್ಮ ಬೇಸಾಯದ ವಿಷಯಾನೇ ಮಾತನಾಡುತ್ತ ಇರುವಿರಲ್ಲ. ಗೌರಿ ಮದುವೇನ ಯಾವಾಗ ಮಾಡುವಿರಿ?" ನಡುವೆ ಮಾತನಾಡಿದಳು ತಾಯಕ್ಕ

Sri Vidyabharathi Book Centre, Sringeri

CC-O. In Public Domain. Digitized by eGangotri

"ನಾನು ಯೋಚನೆ ಮಾಡುತ್ತ ಇರುತ್ತೇನೆ. ನೀನು ಗೌರಿ ಮದುವೆ ಮಾಡಿಬಿಡಿ ಎನ್ನುತ್ತೀಯೆ. ರಂಗಣ್ಣನು ಬಾವಿ ತೆಗೆಸಿಬಿಡಬೇಕು ಅನ್ನುತ್ತಿದ್ದಾನೆ. ಯಾವುದು ಮಾಡುವುದು. ಯಾವುದು ಬಿಡುವುದು. ಎರಡು ಕೆಲಸಕ್ಕು ಹಣ ಎಲ್ಲಿ ಸಾಕಾಗುವುದು.

ರಂಗಣ್ಣ ಮಾತನಾಡದೆ ಕುಳಿತಿದ್ದ. ರಾಮಣ್ಣನವರೇ ಕೇಳಿದರು. "ನೀನು ಏನು ಹೇಳುವೆ ರಂಗಣ್ಣ ?"

ರಂಗಣ್ಣನಿಗೆ ಈ ವಿಷಯದಲ್ಲಿ ಹೇಳಲು ಮನಸ್ಸಿಲ್ಲ. ಅದರೂ ಸಂಕೋಚದಿಂದ ಹೇಳಿದ.

"ಈ ವರುಷ ಬಾವಿ ತೆಗೆಸಿಬಿಡಿ ಆದಷ್ಟು ಶ್ರಮ ಪಟ್ಟು ಬೆಳೆ ತೆಗೆಯೋಣ. ಅದರಿಂದ ಕೈ ತುಂಬ ಹಣ ಬರುವುದು. ಆಮೇಲೆ ಗೌರಿ ಮದುವೆ ಮಾಡಿ. ಈ ಹಣವನ್ನ ಗೌರಿ ಮದುವೆಗೆ ಉಪಯೋಗಿಸಿದರೆ ಬಾವಿಯ ಕೆಲಸ ನಿಂತಂತೆಯೇ."

"ನಮ್ಮ, ಹೆಂಗಸರ ಕಷ್ಟ ನಿಮಗೆ ತಿಳಿಯುವುದಿಲ್ಲ. ಗೌರಿ ವಯಸ್ಸಿಗೆ ಬಂದಿದ್ದಾಳೆ. ಊರಲ್ಲಿ ಎಲ್ಲರೂ ಗೌರಿ ಮದುವೆ ಯಾವಾಗ ಅಂತ ಕೇಳುವವರೆ. ನನಗೂ ಹೇಳಿ ಹೇಳಿ ಸಾಕಾಯ್ತು. ಈ ವರುಷ ಮದುವೆ ಮಾಡಿದ್ದರೆ ಚೆನ್ನಾಗಿತ್ತು." ತಾಯಕ್ಕ ಬೇಸರದಿಂದ ಹೇಳಿದಳು.

"ರಂಗಣ್ಣ ಹೇಳುವುದು ಸರಿ, ಇರುವ ಹಣ ಮದುವೆಗೆ ಉಪಯೋಗಿಸಿದರೆ, ಬಾವಿ ತೆಗೆಸಲು ಸಾಧ್ಯ

Sri Vidyabharathi Book Centre, Sringeri

CC-0. In Public Domain. Digitized by eGangotri

ವಿಲ್ಲ. ಈ ವರುಷ ಬಾವಿ ತೆಗೆಸಲಿ. ಬೆಳೆ ಆದ ಅನಂತರ ಗೌರಿ ಮದುವೆ ಮಾಡೋಣ. ಗೌರಿ ಏನು ಬೆಳೆದು ಅಜ್ಜಿ ಆಗಿರುವುದಿಲ್ಲ" ತೀರ್ಪು ನೀಡಿದ ರಾಮಣ್ಣ. ತನ್ನಲ್ಲಿದ್ದ ಹಣವನ್ನ ರಂಗಣ್ಣನಿಗೆ ಕೊಟ್ಟ. ಬಾವಿ ಕೆಲಸ ಪ್ರಾರಂಭಿಸಲು ತಿಳಿಸಿದ.

ರಂಗಣ್ಣ ಮತ್ತು ರಾಮಣ್ಣ ನಗರಕ್ಕೆ ಹೋದರು. ವ್ಯವಸಾಯದ ಅಧಿಕಾರಿಗಳನ್ನ ಕಂಡರು. ಬಾವಿ ಮತ್ತು ಪಂಪು ಇಡುವ ಬಗ್ಗೆ ಮಾತನಾಡಿದರು. ಸರಕಾರದಿಂದ ಸಿಗುವ ಸಹಾಯಕ್ಕಾಗಿ ಅರ್ಜಿ ಸಹ ಕೊಟ್ಟರು.

ಬಾವಿ ಕೆಲಸಕ್ಕಾಗಿ ಬೇಕಾದ ಹಾರೆ, ಗುದ್ದಲಿ ಮುಂತಾದ ಸಾಮಾನು ಕೊಂಡರು. ಪುರೋಹಿತರನ್ನ ಕಂಡು ಒಳ್ಳೆಯ ದಿವಸ ತಿಳಿದು ಊರು ಸೇರಿದರು.

ಬಾವಿ ಕೆಲಸ ಪ್ರಾರಂಭಿಸಲು ಒಳ್ಳೆಯ ದಿವಸಕ್ಕಾಗಿ ಕಾದು ಕುಳಿತ ರಂಗಣ್ಣ.

* * * *

ಅಂದು ಸೋಮವಾರ ಮುಂಜಾನೆ ಪುರೋಹಿತರು ಬಂದರು. ಎಲ್ಲರೂ ಹೊಲದ ಬಳಿ ಸೇರಿದರು. ಗೌರಿ ಮತ್ತು ತಾಯಕ್ಕ ಪೂಜೆ ಮಾಡಿದರು.

ಪುರೋಹಿತರ ಮಾತಿನಂತೆ ರಂಗಣ್ಣ ಮೊದಲನೆ ಗುದ್ದಲಿ ಹಾಕಿದ. ಬಾವಿಯ ಕೆಲಸ ಪ್ರಾರಂಭ ಆಯಿತು. ಹಗಲು ರಾತ್ರಿ ಎನ್ನದೆ ಕೆಲಸ ಮಾಡಿಸಿದ ರಂಗಣ್ಣ. ಇಪ್ಪತ್ತು ಅಡಿ ಆಳ ತೆಗೆದು ಆಯಿತು. ನೀರು ಧಾರಾಳವಾಗಿ ಬರ ತೊಡಗಿತು. ಆದರೂ ಬೇಸಿಗೆಯಲ್ಲಿ ನೀರಿಗೆ

Sri Vidyabharathi Book Centre, Sringeri.

CC-O. In Public Domain. Digitized by eGangotri

ತೊಂದರೆ ಆದೀತು. ಅದಕ್ಕಾಗಿ ಇನ್ನೂ ಹತ್ತು ಅಡಿ ಆಳ ತೆಗೆಸಿದ ರಂಗಣ್ಣ. ಕಲ್ಲು ಕಟ್ಟಿಸಿದ.

ನಗರಕ್ಕೆ ಹೋಗಿ ಪಂಪುಗಳ ಬಗ್ಗೆ ಮಾತನಾಡಿದ. ಗದ್ದೆಯ ವಿಷಯವಾಗಿ ವ್ಯವಸಾಯದ ಅಧಿಕಾರಿಗಳ ಸಂಗಡ ಮಾತನಾಡಿದ. ಸಕಾಲದಲ್ಲಿ ಪಂಪು ಮತ್ತು ಮೋಟಾರು ಬಂದರೆ ನೀರನ್ನು ಪಡೆಯಲು ಅನುಕೂಲ ಆಗುವುದು. ಮಳೆಗಾಗಿ ಕಾಯಬೇಕಾಗಿಲ್ಲ ಎಂದುಕೊಂಡ ರಂಗಣ್ಣ ಹಿಂತಿರುಗಿ ಬಂದು.

"ಹೋದ ಕೆಲಸ ಆಯಿತೆ?" ಎಂದು ರಾಮಣ್ಣ ಕೇಳಿದ.

"ವ್ಯವಸಾಯದ ಅಧಿಕಾರಿಗಳು ಸಿಕ್ಕಿದ್ದರು. ಮಣ್ಣು ಪರೀಕ್ಷಿಸಲು ಬರುವರು. ಐದು ಆರು ದಿವಸಗಳಲ್ಲಿ ಪಂಪು ಮತ್ತು ಮೋಟಾರು ಸಹ ಬರುವುದು" ಎಂದ ರಂಗಣ್ಣ.

"ಹಾಗಾದರೆ ಎಲ್ಲಾ ಕೆಲಸ ಮುಗಿದ ಹಾಗಾಯಿ ತಲ್ಲವೆ?"

"ಎಲ್ಲಿ ಮುಗಿಯಿತು. ಬಾವಿ ತೆಗೆಸಿದ ಮಾತ್ರಕ್ಕೆ ಆಯಿತೆ? ಹೊಲವನ್ನು ಮಟ್ಟ ಮಾಡಿಸಬೇಕು. ನೀರು ಹರಿದುಹೋಗದಂತೆ ತೆವರಿ ಹಾಕಿಸಬೇಕು. ಕೆಳಪಾತಿಗಳಿಗೆ ಮೇಲು ಪಾತಿಗಳಿಂದ ನೀರು ಬರಬೇಕಾಗಿರುತ್ತೆ. ಅದರಿಂದ ಒಂದಕ್ಕೊಂದು ತಗ್ಗಿನಲ್ಲಿರುವಂತೆ ಮಾಡುವುದು ಒಳ್ಳೆಯದು ಎಂದ ರಂಗಣ್ಣ."

Sri Vidyabharathi Book Centre, Sringeri

"ಏನೋಪ್ಪ ದೇವರು ಬಂದ ಹಾಗೆ ಬಂದಿರುವೆ.

CC-O. In Public Domain. Digitized by eGangotri

ನೀನು ಕೈಹಾಕಿದ ಕೆಲಸ ಮಾತ್ರ ಚೆನ್ನಾಗಿ ಆಗುವುದು. ನೀನು ಬಂದ ಘಳಿಗೆಯೋ ಏನೋ ? ನನ್ನ ಆರೋಗ್ಯವು ಸುಧಾರಿಸುತ್ತಿದೆ. ಬೆಳಗಿನಿಂದ ಸುತ್ತಾಡಿ ಬಂದೆ. ಮಲಗು" ಎಂದು ಹೇಳಿ ರಾಮಣ್ಣನೂ ಮಲಗಿದ.

ರಂಗಣ್ಣ ಬಹುಮಾನ ಪಡೆದ

ರಂಗಣ್ಣ ಕಷ್ಟಪಟ್ಟು ಸಾಗುವಳಿಗೆ ಜಮೀನು ಹದ ಮಾಡಿದ. ಸಕಾಲದಲ್ಲಿ ಬಾವಿಗೆ ಮೋಟಾರು ಜೋಡಿಸಿದ. ಪಂಪು ಸಹ ಹಾಕಿಸಿದ. ''ಈ ಸಾರಿ ಏನು ಬೆಳೆ ಇಡಬೇಕೆಂದಿರುವೆ ?'' ರಾಮಣ್ಣ ಕೇಳಿದ.

"ಹೆಚ್ಚು ಇಳುವರಿ ಕೊಡುವ ಹೈಬ್ರಿಡ್ ಮುಸುಕಿನ ಜೋಳ ಹಾಕೋಣ. ಸುಧಾರಿಸಿದ ರೀತಿ ಬೇಸಾಯ ಮಾಡುವೆನು." ವ್ಯವಸಾಯದ ಅಧಿಕಾರಿಗಳು ಇದನ್ನೇ ಹೇಳಿರುವರು.

''ಬೇಸಾಯ ಮಾಡುವ ರೀತಿ ತಿಳಿದಿದ್ದರೆ ಒಳ್ಳೆಯದಲ್ಲವೆ ?"

ವ್ಯವಸಾಯದ ಅಧಿಕಾರಿಗಳು ಆದಷ್ಟು ತಿಳಿಸಿರುವರು. ಅಲ್ಲದೆ ಆಗಾಗ ಸಲಹೆ ಪಡೆಯುವುದು" ಎಂದ ರಂಗಣ್ಣ.

"ಏನೋಪ್ಪ ನಿನಗೆ ತಿಳಿದ ಹಾಗೆ ಮಾಡು. ಹಣಕ್ಕಾಗಿ ಚಿಂತಿಸಬೇಡ. ನಿನಗೆ ಬೇಕಾದಾಗ ಹಣ ಕೇಳು ಎಂದ ರಾಮಣ್ಣ.

Sri Vidyabharathi Book Centre, Sringeri

* * * *

CC-O. In Public Domain. Digitized by eGangotri

ಗದ್ದೆಯನ್ನು ಕಬ್ಬಿಣದ ನೇಗಿಲಿನಿಂದ ೬-೭ ಅಂಗುಲ ಆಳದವರೆಗೆ ಉಳುಮೆ ಮಾಡಿದ. ಮಣ್ಣನ್ನು ಚನ್ನಾಗಿ ಹದಮಾಡಿದ ರಂಗಣ್ಣ. ಬಿತ್ತನೆ ಕಾಳು ತರಲು ನಗರಕ್ಕೆ ಹೊರಟ.

"ಏನು ಬಿತ್ತನೆ ಕಾಳಿಗೂ ನಗರಕ್ಕೆ ಹೋಗಬೇಕೆ?" ಸಂಶಯದಿಂದ ಕೇಳಿದ ರಾಮಣ್ಣ.

"ನಾವೇ ಬೆಳೆದ ಕಾಳನ್ನು ಬಿತ್ತನೆಗೆ ಉಪಯೋಗಿಸ ಬಾರದು. ವ್ಯವಸಾಯದ ಇಲಾಖೆಯವರು ಬಿತ್ತನೆ ಕಾಳನ್ನು ಪರೀಕ್ಷೆ ಮಾಡುವರು. ಅವರು ಶಿಫಾರಸ್ಸು ಮಾಡಿದ ಕಾಳನ್ನೆ ಉಪಯೋಗಿಸುವುದು ಒಳ್ಳೆಯದು. ಎಕರೆಗೆ ಆರು ಅಥವ ಎಂಟು ಕಿಲೋ ಕಾಳು ಆದರೆ ಸಾಕು" ಎಂದು ವಿವರಿಸಿದ ರಂಗಣ್ಣ. ನಗರಕ್ಕೆ ಹೋಗಿ ಕಾಳು ಮತ್ತು ಸೀಮೆ ಗೊಬ್ಬರ ತಂದ.

ಜೂನ್ ತಿಂಗಳಿನಲ್ಲಿ ಬಿತ್ತನೆ ಮಾಡಿದ. ಎಕರೆ ಒಂದಕ್ಕೆ ಹತ್ತು ಗಾಡಿಯಷ್ಟು ಹಟ್ಟಿಗೊಬ್ಬರವನ್ನು ಮಣ್ಣಿನಲ್ಲಿ ಮಿಶ್ರಮಾಡಿದ್ದ.

ಎಕರೆಗೆ ೩೮ ಕಿಲೋದಂತೆ ಸಾರಜನಕ ತಂದಿದ್ದ. ಜೊತೆಗೆ ೨೪ ಕಿಲೋ ಪಾಸ್ಫರಸ್ ತಂದಿದ್ದ. ಅಲ್ಲದೆ ೨೦ ಕಿಲೋ ಪೊಟ್ಯಾಷ್ ತರಲು ಮರೆತಿರಲಿಲ್ಲ. "ಇದನ್ನೆಲ್ಲಾ ಹಾಕಬೇಕೆ?" ರಾಮಣ್ಣ ಕೇಳಿದ.

"ಹೌದು ಇದೆಲ್ಲಾ ಹಾಕಿದರೆ ಉತ್ತಮ ಬೆಳೆ ಬರುವುದು. ಒಂದೇ ಸಾರಿ ಹಾಕಬೇಕಾಗಿಲ್ಲ. ಕಾಳು ಬಿತ್ತು

Sri Vidyaranya Book Centre, Bangalore

CC-O. In Public Domain. Digitized by eGangotri

ವಾಗ ಎಕರೆಗೆ ೧೩ ಕಿಲೋ ಸಾರಜನಕ ಹಾಕಬೇಕು. ಎಕರೆಗೆ ೨೪ ಕಿಲೋ ಪಾಸ್ಫರಸ್ ಹಾಕಬೇಕು. ಅಲ್ಲದೆ ಎಕರೆ ಒಂದಕ್ಕೆ ೨೦ ಕಿಲೋ ಪೊಟ್ಯಾಷ್ ಹಾಕುವುದನ್ನು ಮರೆಯಬಾರದು. ಬಿತ್ತನೆ ಕಾಳಿಗೆ ಮೂರು ಅಂಗುಲ ದೂರ ಹಾಕಬೇಕು. ೨–೩ ಅಂಗುಲ ಆಳದಲ್ಲಿ ಹಾಕಿದರೆ ಒಳ್ಳೆಯದು" ಎಂದು ಹೇಳಿ ಅದರಂತೆ ಗೊಬ್ಬರ ಹಾಕಿದ್ದ.

ಬಿತ್ತಿದ ಎರಡು ವಾರದ ಅನಂತರ ಸಾಲುಗಳ ಮಧ್ಯೆ ಮಣ್ಣು ಸಡಿಲಿಸಿದ. ಕಳೆ ಕೀಳಿಸಿದ. ಮೊಳಕೆ ಬಂದು ಹದಿನೈದು ದಿವಸಗಳು ಆದುವು. ಆಗ ಶೇ. ೫೦ ಬಿ.ಹೆಚ್.ಸಿ. ಪುಡಿಯನ್ನು ಎಕರೆ ಒಂದಕ್ಕೆ ನಾಲ್ಕು ಕಿಲೋದಂತೆ ಸಿಂಪಡಿಸಿದ. ಇದರಿಂದ ಮಿಡತೆಗಳ ಹಾವಳಿ ಇಲ್ಲದಂತಾಯ್ತು.

ವ್ಯವಸಾಯದ ಅಧಿಕಾರಿಗಳು ಬೆಳೆ ನೋಡಲು ಬಂದಿದ್ದರು. ಬೆಳೆ ನೋಡಿ ಬಹಳ ಸಂತೋಷಪಟ್ಟರು. ರಂಗಣ್ಣ ಕ್ರಮ ಅರಿತು ಬೇಸಾಯ ಮಾಡಿದ್ದ. ರಂಗಣ್ಣ ಮಾದರಿ ರೈತ ಎಂದುಕೊಂಡರು. ಉಳಿದಿದ್ದ ಇಪ್ಪತ್ತೈದು ಕಿಲೋ ಸಾರಜನಕ ತೋರಿಸಿದ ರಂಗಣ್ಣ. ಅದರಲ್ಲಿ ಅರ್ಧವನ್ನು ಒಂದು ತಿಂಗಳ ಅನಂತರ ಹಾಕಲು ತಿಳಿಸಿದರು. ಉಳಿದ ಅರ್ಧವನ್ನು ತೆನೆ ಬರುವ ಮೊದಲು ಹಾಕಲು ಹೇಳಿದರು.

Sri Vidyabharathi Book Centre, Sringeri

ಮೊಳಕೆ ಬಂದ ನಾಲ್ಕು–ಐದು ವಾರಗಳು ಆದುವು.

CC-O. In Public Domain. Digitized by eGangotri

ಶೇಕಡ ೨೦ ಎಂಡ್ರಿನ್ ಎಕರೆ ಒಂದಕ್ಕೆ ೨೪೦ ಸಿ. ಸಿ. ಯಷ್ಟನ್ನು ೨೦ ಗ್ಯಾಲನ್ ನೀರಿನಲ್ಲಿ ಸೇರಿಸಿದ. ಮೊಳಕೆಗಳ ಮೇಲೆ ಸಿಂಪಡಿಸಿದ. ಇದರಿಂದ ಕಾಂಡ ಕೊರೆಯುವ ಹುಳುಗಳ ಹಾವಳಿ ಇಲ್ಲದಂತಾಯ್ತು.

ಮೊಳಕೆ ಬಂದು ಒಂದೂವರೆ ತಿಂಗಳಾಗಿತ್ತು. ಶೇಕಡ ೨೦ ಎಂಡ್ರಿನ್ ಎಕರೆಗೆ ೭೨೦ ಸಿ. ಸಿ. ಯಷ್ಟನ್ನು ೪೦ ಗ್ಯಾಲನ್ ನೀರಿನಲ್ಲಿ ಬೆರಸಿದ. ಬೆಳೆಯ ಮೇಲೆ ಸಿಂಪಡಿಸಿದ ರಂಗಣ್ಣ. ಕ್ರಮ ಅರಿತು ನೀರು ಕೊಡುತ್ತಿದ್ದ. ನೀರು ನಿಲ್ಲದಂತೆ ಸಣ್ಣ ಚರಂಡಿಗಳನ್ನು ಮಾಡಿದ್ದ. ಇದರಿಂದ ಬೆಳೆಗೆ ಯಾವ ರೀತಿಯ ಹಾನಿಯೂ ಆಗಲಿಲ್ಲ.



ಮುಸುಕಿನ ಜೋಳದ ರಾಶಿ

ಮೊಳಕೆ ಬಂದು ಎರಡು ತಿಂಗಳಾಯಿತು. ಆಗ ಮತ್ತೆ ಶೇಕಡ ೨೦ ಎಂಡ್ರಿನ್ ೧೪೪೦ ಸಿ. ಸಿ. ಯಷ್ಟನ್ನು ೪೦ ಗ್ಯಾಲನ್ ನೀರಿನಲ್ಲಿ ಮಿಶ್ರ ಮಾಡಿದ. ಜೋಳದ ಮೇಲೆ ಸಿಂಪಡಿಸಿದ. ಇದರಿಂದ ಜೋಳಕ್ಕೆ ಯಾವ ತರ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದ ರೋಗ ಬರಲು ಆಗಲಿಲ್ಲ.

ಸಸಿಗಳು ಹೂ ಬಿಡಲು ಪ್ರಾರಂಭ ಆಯಿತು. ಶೇಕಡ ೫೫ ಬಿ.ಹೆಚ್.ಸಿ. ಪುಡಿಯನ್ನು ಎಕರೆಗೆ ಒಂಭತ್ತು ಕಿಲೋದಂತೆ ಎರಚಿದ. ಸಸಿಗಳು ಬಾಡದಂತೆ ನೀರು ಹಾಯಿಸುತ್ತಿದ್ದ. ಉಳಿದಿದ್ದ ಹನ್ನೆರಡೂವರೆ ಕಿಲೋ ಸಾರಜನಕವನ್ನು ಹಾಕಿದ.

ರಂಗಣ್ಣನ ಶ್ರಮ ಸಾರ್ಥಕ ಆಯಿತು. ಹೆಚ್ಚು ಬೆಳೆ ಬೆಳೆದ. ವ್ಯವಸಾಯದ ಅಧಿಕಾರಿಗಳು ಇವನ ಶ್ರಮವನ್ನು ಮರೆಯುವರೆ? ಶ್ರಮದ ಫಲಕ್ಕೆ ಸರಕಾರದಿಂದ ಬಹು ಮಾನವೂ ಸಿಕ್ಕಿತು.

ಒಂದೇ ಜಮೀನಿನಲ್ಲಿ ವ್ಯವಸ್ಥಿತ ರೀತಿಯಲ್ಲಿ ಬೆಳೆ ಇಡುವುದು ಕಲಿತಿದ್ದ ರಂಗಣ್ಣ. ಬೆಳೆಗಳ ಬದಲಾವಣೆಯ ಲಾಭಗಳನ್ನು ತಿಳಿದಿದ್ದ.

ತರಿ ಜಮೀನಿನಲ್ಲಿ ನಿಗದಿಯಾದ ಯಾವ ಬೆಳೆಯನ್ನು ಬೆಳೆಯುತ್ತಿರಲಿಲ್ಲ. ಉದ್ದು, ಹೆಸರು, ಅಪ್ಪೆಣಬು ಬೆಳೆಯುತ್ತಿದ್ದ. ಅನಂತರ ಬತ್ತ ಬೆಳೆಯುವುದು ವಾಡಿಕೆ. ಅನುಕೂಲವಾದ ವಾತಾವರಣವಿದ್ದಾಗ ಬತ್ತ, ಕಬ್ಬು, ಬಾಳೆ ಬೆಳೆಯ ತೊಡಗಿದ.

ಬಾಗಾಯಿತು ಜಮೀನಿನಲ್ಲಿ ರಾಗಿ, ಜೋಳ ಬೆಳೆಯುವುದಿಲ್ಲ. ಅನಂತರ ರೊಕ್ಕದ ಬೆಳೆಗಳಾದ ಹತ್ತಿ ಅಥವ ಹೊಗೆಸೊಪ್ಪು ಬೆಳೆಯಿಡುತ್ತಿದ್ದ ರಂಗಣ್ಣ. ಇದರಿಂದ ಹೆಚ್ಚು ಆದಾಯ ರಂಗಣ್ಣನ ಕೈ ಸೇರಿತು.

CC-O. Vidyaranya Digitized by eGangotri

CC-O. In Public Domain. Digitized by eGangotri

ರಾಮಣ್ಣನವರ ಸಂತೋಷ ಹೇಳತೀರದು. ತಾಯಕ್ಕ ಅವರಿಗಂತೂ ಹೇಳಲಾರದ ಆನಂದ. ಎಂದಿಗೆ ಗೌರಿಯನ್ನ ಕೊಟ್ಟು ಮದುವೆ ಮಾಡುವುದು ಎಂದು ಆಕೆಯ ತವಕ.

ಒಂದು ದಿವಸ ಇದ್ದಕ್ಕಿದ್ದ ಹಾಗೆ ರಾಮಣ್ಣನಿಗೆ ನಗರದಿಂದ ಕರೆ ಬಂದಿತು. ವಿಚಾರ ಏನೆಂಬುದು ತಿಳಿಯಿತು. ಬಹುಮಾನ ತೆಗೆದುಕೊಳ್ಳಲು ವ್ಯವಸಾಯದ ಅಧಿಕಾರಿಗಳು ರಾಮಣ್ಣನಿಗೆ ಹೇಳಿ ಕಳುಹಿಸಿದ್ದರು

ಆದರೆ ಬೇಸಾಯ ಮಾಡಿದವರು ಯಾರು? ರಂಗಣ್ಣ ಅಲ್ಲವೇ? ಆದುದರಿಂದ ಬಹುಮಾನ ಅವನೇ ಪಡೆಯಬೇಕು? ರಾಮಣ್ಣನವರು ರಂಗಣ್ಣನಿಗೆ ಈ ಮಾತು ಹೇಳಿದರು. ರಂಗಣ್ಣ ಮೊದಲು ಒಪ್ಪಲಿಲ್ಲ. ಕೊನೆಗೆ ಇಬ್ಬರೂ ಹೊರಟರು. ತಾಯಕ್ಕ ಸುಮ್ಮನಿರುವಳೆ? ತಾನೂ ಬರುವುದಾಗಿ ಹೇಳಿದಳು.

ಗೌರಿ ಸಹ ನೋಡಿ ಸಂತೋಷ ಪಡಲಿ. ಅವಳೂ ಹೊರಡಲಿ ಎಂದ ರಾಮಣ್ಣ. ಗಾಡಿಕಟ್ಟಿಕೊಂಡು ಎಲ್ಲರೂ ಹೋದರು.

ಅಂದು ರಾಮಣ್ಣನವರ ಸಂಭ್ರಮ ಹೇಳತೀರದು. ಸಭೆ ಪ್ರಾರಂಭ ಆಯಿತು. ವ್ಯವಸಾಯದ ಅಧಿಕಾರಿಗಳು ಸುಧಾರಿಸಿದ ಬೇಸಾಯದ ಬಗ್ಗೆ ಮಾತನಾಡಿದರು. ರಂಗಣ್ಣನ ಬೇಸಾಯವನ್ನೂ ವಿವರಿಸಿದರು. ಐದು ನೂರು ರೂಪಾಯಿ, ಜೊತೆಗೆ ಬೆಳ್ಳಿ ಕಪ್ಪನ್ನು ಬಹುಮಾನವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರಂಗಣ್ಣನಿಗೆ ಕೊಟ್ಟರು.

ರಂಗಣ್ಣನು ಬಹುಮಾನವನ್ನು ಪಡೆದು ರಾಮಣ್ಣನ ಕೈಲಿ ಕೊಡಲು ಹೋದ. ರಾಮಣ್ಣನು "ಇದು ನನಗೇ ಕಪ್ಪ? ಅದು ಗೌರಿಯ ಪಾಲು. ಅವಳಿಗೇ ಇರಲಿ" ಎಂದ ರಾಮಣ್ಣ.



ರಂಗಣ್ಣ ಸುಧಾರಿಸಿದ ಬೇಸಾಯ ಮಾಡಿದ್ದಕ್ಕಾಗಿ ಬಹುಮಾನ ಪಡೆದ

ಗೌರಿ ನಾಚಿಕೊಂಡಳು. ರಂಗಣ್ಣ ಬಹುಮಾನವನ್ನು ಗೌರಿಯ ಕೈಗೆ ಇಟ್ಟ. ಗೌರಿ ನಾಚಿಕೊಂಡು ಬಹುಮಾನವನ್ನು ತೆಗೆದುಕೊಂಡಳು.

ಊರಿಗೆ ಹೊರಟರು. ದಾರಿಯಲ್ಲಿ ಆ ಮಾತು ಈ ಮಾತು ಪ್ರಾರಂಭವಾಯಿತು. ಶಿವಪುರದ ಜಮೀನು ಏನು ಮಾಡುವುದು ಎಂದು ಯೋಚಿಸುತ್ತಿದ್ದ ರಂಗಣ್ಣ.

Sri Vidyabharathi Book Centre, Sringeri

CC-O. In Public Domain. Digitized by eGangotri

"ರಂಗಣ್ಣ, ನೀನು ದೇವರು ಬಂದಹಾಗೆ ನಮ್ಮ ಮನೆಗೆ ಬಂದೆ. ಬಂದ ಘಳಿಗೆ ಒಳ್ಳೆಯದು. ಮುಟ್ಟಿದ್ದೆಲ್ಲಾ ಚಿನ್ನ ಆಗುತ್ತಿದೆ. ಆದರೆ ನನ್ನ ಒಂದು ಆಸೆ ಮಾತ್ರ ಈಡೇರಲಿಲ್ಲವಲ್ಲ ಎಂದನು ರಾಮಣ್ಣ. ರಂಗಣ್ಣನಿಗೆ ಗಾಬರಿ ಆಯಿತು. ಅವನು ಬೆಚ್ಚಿದ. ಸಾವಧಾನದಿಂದ ಕೇಳಿದ. "ಅದೇನು ಹೇಳಿ ಮಾಡೋಣ ಅದಕ್ಕೇನಂತೆ?"

"ನೀನು ದೊಡ್ಡ ಮನುಸ್ಸು ಮಾಡಬೇಕು. ಗೌರಿಯ ಕೈ ಹಿಡಿಯಬೇಕು. ಈ ನಿನ್ನ ಉಪಕಾರವನ್ನು ನಾನು ಎಂದಿಗೂ ಮರೆಯುವುದಿಲ್ಲ" ಎಂದರು.

ರಂಗಣ್ಣನಿಗೆ ನಾಚಿಕೆಯೂ ಆಯಿತು. ಆದರೂ ಅವನು ಗೌರಿಯ ಕಡೆ ಕಣ್ಣು ತಿರುಗಿಸಿದ. ಅವಳ ಮುಖ ಕೆಂಪಾಗಿತ್ತು. ನಾಚಿ ತಲೆ ತಗ್ಗಿಸಿದ್ದಳು.

ತಾಯಕ್ಕ ಇಬ್ಬರನ್ನು ನೋಡಿದಳು. ಅವಳ ಮುಖದಲ್ಲಿ ನಗು ಮಿಂಚಿತು. ಅವಳು ತನ್ನ ಗಂಡನನ್ನು ನೋಡಿದಳು. ಆ ಕಣ್ಣಿನಲ್ಲಿ ತೃಪ್ತಿ ಇತ್ತು. ರಾಮಣ್ಣನು ಮುಗುಳುನಗೆ ಬೀರಿದ.